## ಅಧ್ಯಾಯ – ೧೦

# ನ್ಯಾಯಾಡಳಿತ

ಶಾಸನೋಕ್ತವಾಗಿರುವಂತೆ, ರಾಜ್ಯದ ಇತರೆಡೆಗಳಂತೆ ಮಂಡ್ಯ ಜಿಲ್ಲೆಯಲ್ಲಿಯೂ ನ್ಯಾಯಪಾಲನೆಯು ಕಟ್ಟುನಿಟ್ಟಾಗಿದ್ದಿತು. ಗಂಗರ ಕಾಲದಲ್ಲಿ ಧರ್ಮಾಧ್ಯಕ್ಷ ಅಥವಾ ಧರ್ಮಾಧಿಕಾರಿ ಮತ್ತು ರಾಜ್ಯಾಧ್ಯಕ್ಷರು ನ್ಯಾಯಮೂರ್ತಿಗಳಾಗಿದ್ದರು. ಕಂದಾಯ ವ್ಯಾಜ್ಯ ಪರಿಹಾರ ಧರ್ಮಕರಣಿಕರಿಂದ ನಡೆಯುತ್ತಿತ್ತು. ಮಾಮೂಲು ವ್ಯಾಜ್ಯಗಳು ಗ್ರಾಮ ಅಥವಾ ನಗರ ಸಭೆಗಳಲ್ಲಿ ತೀರ್ಮಾನವಾಗುತ್ತಿದ್ದವು. ಸಾಕ್ಷಿ ಪುರಾವೆಗಳಿಲ್ಲದೆಡೆಗಳಲ್ಲಿ 'ದಿವ್ಯ ಪ್ರಮಾಣ'ದ ಮೂಲಕ ಪರಿಹಾರ ಕಂಡುಕೊಳ್ಳಲಾಗುತ್ತಿತ್ತು. ಅಂದರೆ, ತಪ್ಪಿತಸ್ಥನ ಕೈಯನ್ನು ಕುದಿಯುವ ತುಪ್ಪದಲ್ಲಿ ಅದ್ದಿಸುವ ಅಥವಾ ಕಾದ ಕಬ್ಬಿಣದ ಸಲಾಕೆಯನ್ನು ಹಿಡಿಸುವ ಭಯ ಒಡ್ಡಿ ನಿಜ ಹೇಳಿಸಲಾಗುತ್ತಿತ್ತು. ಇದಲ್ಲದೆ ದೇವರ ಮುಂದೆಯೂ ಸಾಕ್ಷಿ ಪ್ರಮಾಣಗಳನ್ನು ಮಾಡಿಸಲಾಗುತ್ತಿತ್ತು. ಮಂಡ್ಯ ತಾಲೂಕಿನ ದೊಡ್ಡಗರುಡನಹಳ್ಳಿಯ ೧೨೭೫ ಶಾಸನದ ಹಳ್ಳಿ ಸೀಮಾ ವಿವಾದ ಕುರಿತ 'ಕನ್ನಯನು ದಿವ್ಯ ಹಿಡಿದು ಗೆದ್ದ' ಎಂಬ ಉಲ್ಲೇಖ ಹಾಗೂ ಗುತ್ತಲಿನ ೧೬೫೮ರ ಕೂಟ ತಾಮ್ರ ಶಾಸನದಲ್ಲಿ ಬರುವ ದೇವಾರ್ಚನಾ ಹಕ್ಕಿಗೆ ಸಂಬಂಧಿಸಿದ ತುಪ್ಪದದೃಷ್ಟ ಪವಾಡ ಎಂಬ ಉಲ್ಲೇಖಗಳು ಇದನ್ನು ಪುಷ್ಟೀಕರಿಸುತ್ತವೆ.

ಸುವ್ಯವಸ್ಥಿತ ನ್ಯಾಯಾಡಳಿತ ಕ್ರಮ ಜಾರಿಗೆ ಬರುವ ಮೊದಲು ಜಿಲ್ಲೆಯಲ್ಲಿ ಗ್ರಾಮೀಣ ನ್ಯಾಯಾಡಳಿತ ಕ್ರಮ ಅಸ್ತಿತ್ವದಲ್ಲಿದ್ದಿತು. ಜನತೆ ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಉದ್ಭವಿಸುತ್ತಿದ್ದ ವ್ಯಾಜ್ಯ ವಿವಾದಗಳನ್ನು ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು. ಈ ತೀರ್ಮಾನ ಹಲವು ಹಂತಗಳಲ್ಲಿ ಬಗೆಹರಿಯುತ್ತಿತ್ತು. ಹಳ್ಳಿಯ ಪ್ರಾಥಮಿಕ ಹಂತದಲ್ಲಿ ತೀರ್ಮಾನವಾಗದ ವಿವಾದಗಳು ಅಂತರಹಳ್ಳಿಗಳ, ಹೋಬಳಿ ಮಟ್ಟಕ್ಕೂ ಹೋಗಿ, ಅಲ್ಲಿಯೂ ಮುಂದುವರಿದರೆ ಕೊನೆಗೆ ನ್ಯಾಯಾಧೀಶರನ್ನೊಳಗೊಂಡ ರಾಜನ ಆಸ್ಥಾನದಲ್ಲಿ ತೀರ್ಮಾನವಾಗುತ್ತಿತ್ತು. ಆ ಮಟ್ಟಕ್ಕೆ ಮುಟ್ಟುವ ವ್ಯಾಜ್ಯ ಗಂಭೀರ ರೂಪದ್ದಾಗಿರುತ್ತಿತ್ತು. ಸಾಮಾನ್ಯವಾಗಿ ಹಳ್ಳಿಯ ಹಿರಿಯರೇ ತಮ್ಮ ಮಟ್ಟದಲ್ಲಿ ಎಲ್ಲಾ ವಿವಾದಗಳನ್ನೂ ಪರಿಹರಿಸುತ್ತಿದ್ದರು.

ನ್ಯಾಯದಾನ ಮಾಡುವ ಗ್ರಾಮ ಮುಖಂಡರು ಸಮಾಜದ ವಿವಿಧ ಸ್ತರಗಳಿಗೆ ಅಂದರೆ, ದೇವರ ವಕ್ಕಲಿಗೆ, ವಿವಿಧ ವಕ್ಕಲುಗಳಿಗೆ, ಜಾತಿಗಳಿಗೆ ಹಾಗೂ ಕೇರಿಗಳಿಗೆ ಸೇರಿದವರಾಗಿದ್ದು, ಈ ರೀತಿ ನ್ಯಾಯ ನಿರ್ಣೇತರಾಗಲು ತಮ್ಮ ವೈಯಕ್ತಿಕ ವರ್ಚಸ್ಸನ್ನೂ ತಕ್ಕಮಟ್ಟಿಗೆ ವಿದ್ಯೆಯನ್ನೂ ಹಾಗೂ ಮಾತನಾಡುವ ಶೈಲಿಯನ್ನೂ ಹೊಂದಿರಬೇಕಾಗುತ್ತಿತ್ತು, ಹಲವಾರು ಬಾರಿ ಇದು ಅನುವಂಶೀಯವೂ ಆಗುತ್ತಿತ್ತು. ಅಂತಹ ಹಿರಿಯರ ಗುಂಪನ್ನು 'ಪಂಚಾಯಿತಿ ಕಟ್ಟೆ' ಎನ್ನುತ್ತಿದ್ದರು.

ಪಂಚಾಯಿತಿ ಕಟ್ಟೆಗೆ ಒಯ್ಯಲ್ಪಡುತ್ತಿದ್ದ ವಿಷಯಗಳು ವೈವಿಧ್ಯಮಯವಾಗಿರುತ್ತಿದ್ದವು. ಅವುಗಳಲ್ಲಿ ಆಸ್ತಿವಿವಾದ, ಜಮೀನಿಗೆ ನೀರು ಬಿಡದಿರುವುದು, ಹೊಲದೊಳಗಿನ ಫಸಲಿನ ಮೇಲೆಯೇ ಗಾಡಿ ಬಿಡುವುದು, ತೆಂಗಿನಕಾಯಿ, ಆಡು, ಕುರಿಗಳನ್ನು ಕದಿಯುವುದು, ಒಡವೆ ಅಪಹರಣ, ಹೆಣ್ಣುಮಕ್ಕಳನ್ನು ಕೆಡಿಸಿದ ವಿಷಯ, ವಿವಾಹಿತರ ಅನೈತಿಕ ಸಂಬಂಧ, ಅತ್ತೆನಾದಿನಿಯರ ಮನಸ್ತಾಪ, ಕೆಟ್ಟಪದಗಳ ಬಳಕೆ ಇತ್ಯಾದಿಗಳೂ ಸೇರಿರುತ್ತಿದ್ದವು. ಅನ್ಯಾಯಕ್ಕೊಳಗಾದ ವ್ಯಕ್ತಿ ತನ್ನ ದೂರನ್ನು ಹಳ್ಳಿಯ ಮುಖಂಡನಿಗೆ ತಿಳಿಸಿದಾಗ ಆತ ಇತರ ಮುಖಂಡರೊಡನೆ ಸಮಾಲೋಚಿಸಿ, ಅವಶ್ಯವಿದ್ದಲ್ಲಿ ತೋಟಿಯ ಕೈಲಿ ಡಂಗುರ ಸಾರಿಸುತ್ತಿದ್ದನು. ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಾದ ಅರಳೀಕಟ್ಟೆ, ದೇವಸ್ಥಾನ, ಅಯ್ಯನವರ ಚಾವಡಿ ಅಥವಾ ಪಂಚಾಯಿತಿ ಕಟ್ಟೆಗಳಲ್ಲಿ ನ್ಯಾಯ ತೀರ್ಮಾನ ಸಭೆ ಸೇರುತ್ತಿದ್ದಿತು.

ಬಿಸಿಲಿನ ಝಳ ತಪ್ಪಿಸಲು ಹಾಗೂ ರೈತರಿಗೆ ಬಿಡುವಿನ ವೇಳೆಯಲ್ಲಿ ಅನುಕೂಲವಾಗುವಂತೆ, ಪಂಚಾಯಿತಿ ಸಾಮಾನ್ಯವಾಗಿ ಸಂಜೆಯ ನಂತರ ಸೇರುತ್ತಿತ್ತು. ದೀಪದ ಬೆಳಕನ್ನೇ ಸಾಕ್ಷಿಯಾಗಿ ಪರಿಗಣಿಸಲಾಗುತ್ತಿತ್ತು. ನ್ಯಾಯ ನಿರ್ಣಯಕ್ಕಾಗಿ ಪ್ರಶಸ್ತವಾದ ದಿನಗಳನ್ನು ಮಾತ್ರ ಆಯ್ದುಕೊಳ್ಳುತ್ತಿದ್ದರು. ಅಮಾವಾಸ್ಯೆ, ಹುಣ್ಣಿಮೆಗಳಂದೂ ಗ್ರಹಣದ ದಿನಗಳಂದೂ ಪಂಚಾಯಿತಿ ಸೇರುತ್ತಿರಲಿಲ್ಲ.

ಪಂಚಾಯಿತಿ ಮಟ್ಟದಲ್ಲಿ ಬಗೆಹರಿಯದ ವಿವಾದಗಳನ್ನು 'ಮೇಲ್ ಪಂಚಾಯಿತಿ'ಗೆ ಕಳುಹಿಸಲಾಗುತ್ತಿತ್ತು. ಇದರಲ್ಲಿ ಸುತ್ತಮುತ್ತಲ ಗ್ರಾಮಗಳ ಹಿರಿಯರು ಸೇರುತ್ತಿದ್ದರು. ಸಾಮಾನ್ಯವಾಗಿ ಈ ಹಂತದಲ್ಲಿ ನ್ಯಾಯಗಳು ತೀರ್ಮಾನವಾಗಿ ಬಿಡುತ್ತಿದ್ದವು. ಇಲ್ಲಿಯೂ ಇತ್ಯರ್ಥವಾಗದ ವಿಷಯಗಳನ್ನು 'ಕಟ್ಟೆಮನೆ' ನ್ಯಾಯಕ್ಕೆ ಒಪ್ಪಿಸಲಾಗುತ್ತಿತ್ತು. ಇಂತಹ ಕಟ್ಟೆಮನೆ ಹೊಂದಿದ್ದ ನ್ಯಾಯಸ್ಥಾನಕ್ಕೆ ಮದ್ದೂರು ತಾಲೂಕಿನ ತಗ್ಗಹಳ್ಳಿ ಉತ್ತಮ ಉದಾಹರಣೆ. ಅದೇ ರೀತಿ ಮಂಡ್ಯ ತಾಲೂಕಿನ ದುದ್ದ ಗ್ರಾಮವೂ ಸಹ ೨೪ ಹಳ್ಳಿಗಳನ್ನೊಳಗೊಂಡ ಇನ್ನೊಂದು ಕಟ್ಟೆಮನೆಯಾಗಿತ್ತೆಂದು ತಿಳಿದುಬರುತ್ತದೆ. ಕಟ್ಟೆಮನೆಗೆ ಒಬ್ಬ ನ್ಯಾಯಾಧೀಶರಿರುತ್ತಿದ್ದರು. ಇವರು ಸಾಮಾನ್ಯವಾಗಿ ಊರಿನ ಪ್ರಮುಖ ವ್ಯಕ್ತಿಯಾಗಿದ್ದು, ಆ ಹುದ್ದೆ ನಾಲ್ಕು ಊರುಗಳ ಸಮಸ್ತರೂ ಒಮ್ಮತದಿಂದ ನೀಡಿದ ಅಧಿಕಾರಯುತ ಹುದ್ದೆಯಾಗಿರುತ್ತಿತ್ತು. ಇದನ್ನು ವಂಶಪಾರಂಪರ್ಯವಾಗಿಯೂ ಪಡೆಯಲಾಗುತ್ತಿತ್ತು. ಕಟ್ಟೆಮನೆಗಳಿಗೆ ಎಲ್ಲರೂ ಹೆದರುತ್ತಿದ್ದರು. ಕಟ್ಟೆಮನೆಯಲ್ಲಿ ಇತ್ಯರ್ಥವಾಗದ ವಿವಾದಗಳು ವಿರಳವಾಗಿದ್ದವು. ವಿಶೇಷತಃ ಇಲ್ಲಿ ಇತ್ಯರ್ಥವಾಗದ ವಿವಾದಗಳನ್ನು ಸಂಸ್ಥಾನಕ್ಕೆ ನಂತರ ಕೋರ್ಟುಗಳಿಗೆ ಕಳುಹಿಸಲಾಗುತ್ತಿತ್ತು. ಪಂಚಾಯಿತಿ ಕಟ್ಟೆ ಹತ್ತಿದ ಅಥವಾ ದಂಡನೆ ವಿಧಿಸಲ್ಪಟ್ಟ ವ್ಯಕ್ತಿ ಅದನ್ನು ಅವಮಾನವೆಂದು ಭಾವಿಸುತ್ತಿದ್ದ. ಇಂತಹ ಜನ ಸಾಮಾಜಿಕವಾಗಿ ಬಹಿಷ್ಕೃತರಾಗುತ್ತಿದ್ದರು. ಸಾಮಾನ್ಯವಾಗಿ ನ್ಯಾಯಾಡಳಿತ ಮಾನವನ ನೈತಿಕ ಹಾಗೂ ಸೈದ್ಧಾಂತಿಕ ಹಿನ್ನೆಲೆಗಳೊಂದಿಗೆ ಕಾರ್ಯನಿರ್ವಹಿಸುತ್ತವೆ. ಹಿಂದೂ ನ್ಯಾಯ ಪದ್ಧತಿಯಲ್ಲಿ ರಾಜನೇ ನ್ಯಾಯಾಧಿಪತಿಯಾಗಿದ್ದನು. ಕಾಲಕಾಲಕ್ಕೆ ನ್ಯಾಯಪೀಠವನ್ನು ಅಲಂಕರಿಸಿ ತಪ್ಪಿತಸ್ಥರಿಗೆ ದಂಡನೆ ವಿಧಿಸಿ, ಶಿಷ್ಟರನ್ನು ರಕ್ಷಣೆ ಮಾಡುತ್ತಿದ್ದನು. ಶ್ರೀರಂಗಪಟ್ಟಣದ ಪತನಾನಂತರ ಮೈಸೂರು ಅರಸರ ಆಡಳಿತ ಪುನರಾರಂಭವಾದಾಗ ನ್ಯಾಯಾಡಳಿತಕ್ಕಾಗಿ ಯಾವುದೇ ಪ್ರತ್ಯೇಕ ಇಲಾಖೆ ಅಸ್ತಿತ್ವದಲ್ಲಿರಲಿಲ್ಲ. ದಿವಾನರಾದ ಪೂರ್ಣಯ್ಯನವರು ಪ್ರಮುಖ ಪಟ್ಟಣಗಳಲ್ಲಿ ಪೂರ್ವದಲ್ಲಿದ್ದ ಖಾಜಿ ಪದ್ಧತಿಯನ್ನು ಮುಂದುವರೆಸಿದರೂ, ಖಾಜಿಗಳ

ನ್ಯಾಯ ನಿರ್ಣಯಗಳು ಹೆಚ್ಚಾಗಿ ಮುಸ್ಲಿಮರ ಧಾರ್ಮಿಕ ಸಂಪ್ರದಾಯಗಳಿಗೆ ಸೀಮಿತವಾಗಿದ್ದು, ಹಿಂದೂಗಳ ನ್ಯಾಯ ತೀರ್ಮಾನ ತಮ್ಮ ಮೂಲ ಸಿದ್ಧಾಂತಗಳ ಪ್ರಕಾರವೇ ನಡೆಯುತ್ತಿದ್ದವು. ಈ ಸಿದ್ಧಾಂತಗಳ ಅನುಪಸ್ಥಿತಿಯಲ್ಲಿ ಶಾಸ್ತ್ರಗಳ ಆಧಾರದ ಮೇಲೆ ನ್ಯಾಯ ನಿರ್ಣಯಗಳು ಕೈಗೊಳ್ಳಲ್ಪಡುತ್ತಿದ್ದವು. ಕ್ಷುಲ್ಲಕ ಸಮಸ್ಯೆಗಳನ್ನು ತಾಲೂಕು ಮಟ್ಟದ ಸರ್ಕಾರಿ ಅಧಿಕಾರಿಯಾದ ಅಮಲ್ದಾರನು ಬಗೆಹರಿಸುತ್ತಿದ್ದನು. ಪ್ರಮುಖ ಆರೋಪಿಗಳನ್ನೂ ತಪ್ಪಿತಸ್ಥರನ್ನೂ ಪ್ರಶ್ನಿಸಿ ಶಿಕ್ಷಿಸಲು ಅಮಲ್ದಾರನು 'ಪಂಚಾಯತಿ' (ಐದು ಗಣ್ಯವ್ಯಕ್ತಿಗಳ ಗುಂಪು) ಸೇರಿಸಿ ಅಹವಾಲುಗಳನ್ನು ಆಲಿಸುತ್ತಿದ್ದನು. ಈ ಪಂಚಾಯಿತಿಯ ನಡಾವಳಿಗಳನ್ನು ಅಮಲ್ದಾರ ಅಥವಾ ಸುಬೇದಾರ ತನ್ನ ವರದಿಯೊಂದಿಗೆ ದಿವಾನರಿಗೆ ರವಾನಿಸುತ್ತಿದ್ದನು. ಸಾಮಾನ್ಯವಾಗಿ ಈ ವರದಿಗಳನ್ನು ದಿವಾನರು ಒಪ್ಪುತ್ತಿದ್ದು, ಅತೀ ವಿಶೇಷ ಸಂದರ್ಭಗಳಲ್ಲಿ ಮಾತ್ರ ಮತ್ತೊಮ್ಮೆ ಪರಿಷ್ಕರಿಸಿ ಬ್ರಿಟಿಷ್ ರೆಸಿಡೆಂಟರಿಗೆ ಕಳುಹಿಸಿ, ಒಪ್ಪಿಗೆ ಪಡೆದು, ತೀರ್ಪು ನೀಡಿ, ವಿವಾದಗಳನ್ನು ಬಗೆಹರಿಸುತ್ತಿದ್ದರು.

ಮಂಡ್ಯದ ಪ್ರಸಿದ್ಧ ದಾನಿ ಹಾಗೂ ನೂಲಿನ ವ್ಯಾಪಾರಿ ಡಿ. ಧರಣಪ್ಪ ಹಾಗೂ ಸಿಂಗಳಾಚಾರ್ ಅವರು ಯಾವುದೇ ಕೋರ್ಟುಗಳು ಪ್ರಾರಂಭವಾಗುವುದಕ್ಕೆ ಮೊದಲು ಮಂಡ್ಯದಲ್ಲಿ ಗೌರವ ನ್ಯಾಯಾಧೀಶರಾಗಿ ಪಂಚಾಯಿತಿ ನ್ಯಾಯಾಡಳಿತ ನಡೆಸುತ್ತಿದ್ದರೆಂದೂ, ಇವರನ್ನು ಸರಕಾರವೇ ಸ್ಥಳೀಯವಾಗಿ ನೇಮಕ ಮಾಡಿತ್ತೆಂದೂ ಇವರ ತೀರ್ಮಾನಗಳು ನ್ಯಾಯಯುತವೂ ಸರ್ವ ಸಮ್ಮತವೂ ಆಗಿದ್ದುವೆಂದೂ ತಿಳಿದುಬರುತ್ತದೆ.

**ಪೂರ್ಣಯ್ಯನವರ ಸುಧಾರಣೆಗಳು :**

ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಾಡಳಿತ ಅಥವಾ ನಿರ್ಣಯಗಳಲ್ಲಿ ಮಹತ್ತರವಾದ ವ್ಯತ್ಯಾಸವೇನೂ ಇರಲಿಲ್ಲ. ಐದು 'ಪಗೋಡ' (ಚಿನ್ನದ ನಾಣ್ಯ)ಗಳ ಮೌಲ್ಯದ ಆಸ್ತಿ ವಿವಾದಗಳನ್ನು ಮುಕ್ತ ನ್ಯಾಯಾಲಯದಲ್ಲಿ ತೀರ್ಮಾನಿಸುವ ಅಧಿಕಾರವನ್ನು ಅಮಲ್ದಾರನು ಹೊಂದಿದ್ದನು. ಆ ಮೊತ್ತಕ್ಕೆ ಮೇಲ್ಪಟ್ಟ ವಿವಾದಗಳು ಪಂಚಾಯಿತಿಯಲ್ಲಿ ತೀರ್ಮಾನವಾಗುತ್ತಿದ್ದವು. ಇಲ್ಲಿಯೂ ಯಾವುದಾದರೂ ತೊಡಕುಂಟಾದಲ್ಲಿ ಅಂತಹ ವಿವಾದಗಳನ್ನು ದಿವಾನರಿಗೆ ಕಳುಹಿಸಲಾಗುತ್ತಿತ್ತು. ಸಿವಿಲ್‌ದಾವೆಗಳ ತೀರ್ಮಾನ ಅತೃಪ್ತಿಕರವಾದಲ್ಲಿ, ಯಾರು ಬೇಕಾದರೂ ದಿವಾನರಲ್ಲಿ ಅಪೀಲು ಮಾಡಿಕೊಳ್ಳಬಹುದಿತ್ತು. ದಿವಾನರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಕೈಗೊಂಡು ಪ್ರತೀ ಜಿಲ್ಲೆಯ ಸಮಗ್ರ ಮಾಹಿತಿಯುಳ್ಳವರಾಗಿರುತ್ತಿದ್ದರು. ೧೮೦೫ರ ವೇಳೆಗೆ ದಿವಾನ್ ಪೂರ್ಣಯ್ಯನವರು ನ್ಯಾಯಾಡಳಿತಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯ ಅಗತ್ಯವನ್ನು ಮನಗಂಡು, ಬ್ರಿಟಿಷ್ ಸರ್ಕಾರಕ್ಕೆ ಇದರ ಬಗ್ಗೆ ಅಧಿಕೃತ ಸೂಚನೆಯೊಂದನ್ನು ಕಳುಹಿಸಿದರು. ಅದರಂತೆ ಬ್ರಿಟಿಷ್ ಸರ್ಕಾರ ಇಬ್ಬರು ಭಕ್ಷಿಗಳು, ಇಬ್ಬರು ಶಿರಸ್ತೇದಾರರು, ಹಾಗೂ ಆರು ಮಂದಿ ಗಣ್ಯವ್ಯಕ್ತಿಗಳನ್ನೊಳಗೊಂಡ 'ಅದಾಲತ್' ನ ಸ್ಥಾಪನೆಗೆ ಅನುಮತಿ ನೀಡಿತು. ಈ ನ್ಯಾಯಾಲಯದಲ್ಲೂ ನ್ಯಾಯ ಮೂರ್ತಿಗಳ ಸಮ್ಮುಖದಲ್ಲಿ ಸವಾಲು ಪ್ರತಿಸವಾಲುಗಳು ನಡೆದು, ಫಿರ್ಯಾದಿ ಹಾಗೂ ಉಳಿದವರು ಖುದ್ದಾಗಿ ಹಾಜರಾಗಿ ಅವುಗಳನ್ನು ಆಲಿಸುತ್ತಿದ್ದರು. ಸಂಬಂಧಪಟ್ಟ ದಾಖಲೆಗಳನ್ನು 'ಪ್ರದರ್ಶಿತ'ಗಳನ್ನಾಗಿ ಬಳಸಲಾಗುತ್ತಿತ್ತು.ಆದರೆ ವಾದ ಪ್ರತಿವಾದಗಳ ದಾಖಲಾತಿ ಕಾರ್ಯ ನಡೆಯುತ್ತಿರಲಿಲ್ಲ.

ಈ ಮಾದರಿಯ ನ್ಯಾಯಾಡಳಿತ ಕ್ರಮ ೧೮೩೧ರ ವರೆಗೆ ಮುಂದುವರಿಯಿತು. ಆ ವರ್ಷ ಮೈಸೂರು ಪ್ರದೇಶಕ್ಕಾಗಿಯೇ ಸ್ಥಾಪನೆಯಾದ ಬ್ರಿಟಿಷ್ ಕಮೀಷನ್, ಈ ಪ್ರಾಂತದಲ್ಲಿ ನಡೆಯುತ್ತಿದ್ದ ನ್ಯಾಯಾಡಳಿತ ಕ್ರಮ ರಾಜ್ಯದ ಅಗತ್ಯಗಳಿಗೆ ಅಸಮರ್ಪಕ ಎಂದು ಪರಿಗಣಿಸಿ, ೨೭ನೇ ಅಕ್ಟೋಬರ್ ೧೮೩೪ರಂದು ನ್ಯಾಯಾಲಯಗಳನ್ನು ಸ್ಥಾಪಿಸಿತು. ಅದರಂತೆ ಅಮಲ್ ಹಾಗೂ ಟೌನ್ ಮುನ್ಸೀಫ್ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದವು. ಇವುಗಳ ಮೇಲ್ಪಟ್ಟ ಅಪೀಲ್ ನ್ಯಾಯಾಲಯಗಳಾಗಿ ಪ್ರಿನ್ಸಿಪಾಲ್ ಸದರ್ ಮುನ್ಸೀಫ್ ನ್ಯಾಯಾಲಯ ಮತ್ತು ಯೂರೋಪಿಯನ್

ಸೂಪರಿಂಟೆಂಡೆಂಟರ ನ್ಯಾಯಾಲಯಗಳೂ ಸ್ಥಾಪಿಸಲ್ಪಟ್ಟವು. ಇವುಗಳಿಗಿಂತಲೂ ಉನ್ನತ ಹಾಗೂ ಆಖೈರು ನ್ಯಾಯಾಲಯಗಳಾಗಿ 'ಹುಜೂರ್ ಅದಾಲತ್' ಮತ್ತು ಕಮೀಷನರ್ ನ್ಯಾಯಾಲಯಗಳು ಸ್ಥಾಪಿಸಲ್ಪಟ್ಟವು. ಇವುಗಳೊಂದಿಗೆ ಪಂಚಾಯಿತಿ ನ್ಯಾಯಾಲಯಗಳೂ ತಮ್ಮ ಕಾರ್ಯಚಟುವಟಿಕೆ ಮುಂದುವರೆಸಿದ್ದವು. ಮೇಲ್ಕಂಡ ಎಲ್ಲಾ ನ್ಯಾಯಾಲಯಗಳಲ್ಲಿ ಪಂಚಾಯಿತಿಗಾಗಿ ನೇಮಿಸಲ್ಪಡುವ ಅರ್ಹ ಪಂಚಾಯಿತಿದಾರರ ಪಟ್ಟಿಯನ್ನು ಇಡಲಾಗಿದ್ದಿತು. ಒಂದು ಮೊಕದ್ದಮೆ ದಾಖಲಾದ ಬಳಿಕ ಈ ಪಟ್ಟಿಯಿಂದ ಐದು ಮಂದಿ ಪಂಚಾಯಿತಿದಾರರನ್ನು ಆರಿಸಿ ಅವರಿಗೆ ನ್ಯಾಯ ನಿರ್ಣಯ ಕೆಲಸವನ್ನು ವಹಿಸಲಾಗುತ್ತಿತ್ತು. ಪ್ರತೀ ಪಂಚಾಯಿತಿಯು ಮುಕ್ತ ನ್ಯಾಯಾಲಯದಲ್ಲಿ ಸೇರಿ, ದೂರುಗಳನ್ನು ಆಲಿಸಿ ಅಹವಾಲುಗಳನ್ನು ದಾಖಲಿಸಿಕೊಳ್ಳುತ್ತಿತ್ತು. ಇಪ್ಪತ್ತು ರೂಪಾಯಿಗಳ ಮೌಲ್ಯ ಮೀರದ ಮೊಕದ್ದಮೆಗಳನ್ನು ದಾಖಲಿಸದೇ ನಿರ್ಧರಿಸುವ ಅಧಿಕಾರ ಅಮಲ್ದಾರರಿಗಿದ್ದಿತು. ಇಪ್ಪತ್ತು ರೂಪಾಯಿಗಳಿಂದ ನೂರು ರೂಪಾಯಿ ಒಳಗಿನ ಮೌಲ್ಯದ ಮೊಕದ್ದಮೆಗಳನ್ನು ಅಮಲ್ದಾರರು ದಾಖಲಿಸಿ ನಿರ್ಧರಿಸುತ್ತಿದ್ದರು. ಐನೂರು ರೂಪಾಯಿವರೆಗಿನ ಮೌಲ್ಯದ ಮೊಕದ್ದಮೆಗಳನ್ನು ಪಂಚಾಯಿತಿಯ ಸಹಾಯದಿಂದ ದಾಖಲಿಸಿ ಅಮಲ್ದಾರರು ನಿರ್ಧರಿಸುತ್ತಿದ್ದರು.

ಆ ಸಮಯದಲ್ಲಿ ಮಂಡ್ಯ ಜಿಲ್ಲಾ ಪ್ರದೇಶವು ಮೈಸೂರಿನ ಅಷ್ಟಗ್ರಾಮ ವಿಭಾಗಕ್ಕೆ ಸೇರಿದ್ದು, ಇಲ್ಲಿ ಎರಡು ಪ್ರಿನ್ಸಿಪಾಲ್ ಸದರ್ ಮುನ್ಸೀಫ್ ನ್ಯಾಯಾಲಯಗಳಿದ್ದವು. ಈ ಮುನ್ಸೀಫರು ನೂರು ರೂಪಾಯಿಗಳ ಮೇಲ್ಪಟ್ಟ ಆದರೆ ಸಾವಿರ ರೂಪಾಯಿಗಳಿಗೆ ಮೇಲ್ಪಡದ ಮೌಲ್ಯದ ಮೊಕದ್ದಮೆಗಳ ಬಗ್ಗೆ ತೀರ್ಮಾನ ಕೈಗೊಳ್ಳುತ್ತಿದ್ದರು. ಅಲ್ಲದೇ ಅಮಲ್‌ಗಳಿಂದ ಅಪೀಲಿಗಾಗಿ ಬಂದ ಮೊಕದ್ದಮೆಗಳನ್ನು ಪರಿಶೀಲಿಸುತ್ತಿದ್ದರು. ಒಂದು ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟ ಮೌಲ್ಯದ ಮೊಕದ್ದಮೆಗಳು ಸೂಪರಿಂಟೆಂಡೆಂಟರ ನ್ಯಾಯಾಲಯದಲ್ಲಿ ನಿರ್ಧಾರವಾಗುತ್ತಿತ್ತು. ತಮ್ಮ ವಿಭಾಗದ ಎಲ್ಲಾ ನ್ಯಾಯಾಲಯಗಳ ಆಡಳಿತಾತ್ಮಕ ಅಧಿಕಾರವನ್ನು ಸೂಪರಿಂಟೆಂಡೆಂಟರು ಹೊಂದಿದ್ದರು. 'ಹುಜೂರ್ ಅದಾಲತ್' ಕಮೀಷನರ ಕಚೇರಿಗೆ ಸೇರಿದಂತಹ ನ್ಯಾಯಾಲಯವಾಗಿದ್ದು, ಮೂರು ಮಂದಿ ನ್ಯಾಯಾಮೂರ್ತಿಗಳನ್ನು ಹೊಂದಿತ್ತು. ಇದೊಂದು ಅಪಲೇಟ್ (ಮೇಲ್ಮನವಿ) ನ್ಯಾಯಾಲಯವಾಗಿದ್ದು, ಕಿರಿಯ ನ್ಯಾಯಾಲಯಗಳಿಂದ ಅಪೀಲಿಗಾಗಿ ಬಂದ ಎಲ್ಲಾ ಮೊಕದ್ದಮೆಗಳನ್ನೂ ಆಲಿಸಿ, ತೀರ್ಮಾನ ನೀಡುತ್ತಿದ್ದಿತು. ಆದರೆ ಇಲ್ಲಿ ಯಾವುದೇ ಮೂಲ ದಾವೆಗಳನ್ನು ದಾಖಲಿಸುವಂತಿರಲಿಲ್ಲ.

### ಮರು ಬದಲಾವಣೆಗಳು

೧೮೬೨ರ ವೇಳೆಗೆ ಕಮೀಷನರ್ ನ್ಯಾಯಾಡಳಿತ ಸಂಬಂಧಿತ ಕರ್ತವ್ಯವನ್ನು ಜ್ಯುಡಿಷಿಯಲ್ ಕಮೀಷನರು ನಿರ್ವಹಿಸುತ್ತಿದ್ದರು. ೧೮೬೩ರಲ್ಲಿ ನ್ಯಾಯಾಡಳಿತ ವ್ಯವಸ್ಥೆ ಪುನರ್ವಿಂಗಡಣೆಗೊಂಡು ವಿಭಾಗದ ಸೂಪರಿಂಟೆಂಡೆಂಟರ ಸಹಾಯಕರನ್ನು ಡೆಪ್ಯುಟಿ ಸೂಪರಿಂಟೆಂಡೆಂಟರು ಎಂದು ಕರೆಯಲಾಯಿತು. ಈ ಅಧಿಕಾರಿಗಳು ಎಲ್ಲಾ ಮೌಲ್ಯದ ಸಿವಿಲ್ ದಾವೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದರು. ಅದೇ ವರ್ಷ ಹುಜೂರ್ ಅದಾಲತ್‌ಗಳು ಮತ್ತು ಮುನ್ಸೀಫ್ ನ್ಯಾಯಾಲಯಗಳು ರದ್ದಾದವು. ನ್ಯಾಯಾಡಳಿತ ಕ್ರಮದಲ್ಲಿ ಅತ್ಯುನ್ನತ ಸ್ಥಾನದಲ್ಲಿ ಜ್ಯುಡಿಷಿಯಲ್ ಕಮೀಷನರು, ಅವರಡಿ ವಿಭಾಗೀಯ ಸೂಪರಿಂಟೆಂಡೆಂಟರು, ನಂತರ ಜಿಲ್ಲಾ ಡೆಪ್ಯುಟಿ ಸೂಪರಿಂಟೆಂಡೆಂಟರು, ಸಣ್ಣ ಪ್ರಕರಣಗಳ (ಸ್ಮಾಲ್ ಕಾಸಸ್) ನ್ಯಾಯಾಲಯಗಳ ನ್ಯಾಯಮೂರ್ತಿಗಳು, ಸಹಾಯಕ ಸೂಪರಿಂಟೆಂಡೆಂಟರ ಹಾಗೂ ತಾಲೂಕು ಮಟ್ಟದಲ್ಲಿ ಅಮಲ್ದಾರರು ಕಾರ್ಯ ನಿರ್ವಹಿಸುತ್ತಿದ್ದರು. ೧೮೭೧ರಲ್ಲಿ ಸಹಾಯಕ ಸೂಪರಿಂಟೆಂಡೆಂಟರ ನ್ಯಾಯಾಡಳಿತ ಸಂಬಂಧಿತ ಅಧಿಕಾರವನ್ನು ಹೊಸದಾಗಿ ನೇಮಕಗೊಂಡ ಜ್ಯುಡಿಷಿಯಲ್ ಅಸಿಸ್ಟೆಂಟರಿಗೆ ನೀಡಲಾಯಿತು. ೧೮೭೫ರಲ್ಲಿ ತಾಲೂಕು ಅಮಲ್ದಾರರಿಂದ ನ್ಯಾಯಾಡಳಿತ ಸಂಬಂಧಿತ ಅಧಿಕಾರವನ್ನು ವಾಪಸ್ ಪಡೆಯಲಾಯಿತು. ಸಿವಿಲ್ ಮೊಕದ್ದಮೆ

ಬಗೆಹರಿಸಲು ಮುನ್ಸೀಫರು ನೇಮಕಗೊಂಡರು. ಡೆಪ್ಯುಟಿ ಕಮೀಷನರ್ ಅವರ ಸಿವಿಲ್ ನ್ಯಾಯಾಡಳಿತ ಅಧಿಕಾರ ಕ್ರಮೇಣ ಕಡಿಮೆಯಾಗಿ ಕೊನೆಗೆ ೧೮೭೯ರ ವೇಳೆಗೆ ಸಂಪೂರ್ಣವಾಗಿ ಇಲ್ಲದಂತಾಯಿತು. ಇದಕ್ಕೆ ಬದಲಾಗಿ ಜಿಲ್ಲಾ ನ್ಯಾಯಾಧೀಶರನ್ನು ಮುಖ್ಯಸ್ಥರನ್ನಾಗಿ ಹೊಂದಿದ ಜಿಲ್ಲಾ ನ್ಯಾಯಾಲಯಗಳು ಸ್ಥಾಪನೆಗೊಂಡವು. ಅನಿರ್ಬಂಧಿತ ಮೌಲ್ಯದ ಮೂಲದಾವೆಗಳೂ ಸೇರಿದಂತೆ ಎಲ್ಲಾ ಕಿರಿಯ ನ್ಯಾಯಾಲಯಗಳ ಅಪೀಲುಗಳನ್ನು ಆಲಿಸಿ ತೀರ್ಮಾನ ನೀಡುವ ಅಧಿಕಾರ ಇವರಿಗೆ ದತ್ತವಾಗಿದ್ದಿತು. ಕಾಲಕ್ರಮದಲ್ಲಿ ಜ್ಯುಡಿಷಿಯಲ್ ಅಸಿಸ್ಟೆಂಟರ ಹುದ್ದೆ ರದ್ದಾಗಿ, ಅವರ ಸ್ಥಾನದಲ್ಲಿ ಸಬ್‌ಆರ್ಡಿನೇಟ್ (ಅಧೀನ) ನ್ಯಾಯಾಧೀಶರು ನೇಮಕಗೊಂಡರು. ೧೮೮೪ರ ಮೇ ತಿಂಗಳಿನಲ್ಲಿ ಮೂರು ಮಂದಿ ನ್ಯಾಯಾಧೀಶರನ್ನೊಳಗೊಂಡ ಮುಖ್ಯ ನ್ಯಾಯಾಲಯ ಸ್ಥಾಪನೆಗೊಂಡು, ಇದಕ್ಕೆ ಮುಖ್ಯ ನ್ಯಾಯಾಧೀಶರು ಅಧಿಕಾರಿಯಾದರು. ಆ ಕಾಲಕ್ಕೆ ರಾಜ್ಯದ ಅತ್ಯುನ್ನತ ಅಪೀಲ್ ನ್ಯಾಯಾಲಯ ಇದಾಗಿದ್ದಿತು.

## ಕ್ರಿಮಿನಲ್ ದಂಡ ಸಂಹಿತೆ

ನ್ಯಾಯಾಡಳಿತ ವ್ಯವಸ್ಥೆಯ ಪುನರ್ವಿಂಗಡಣೆಗೆ ಮೊದಲು ಜ್ಯುಡಿಷಿಯಲ್ ಕಮಿಷನರ್ ಅವರಿಂದ ಮೊದಲ್ಗೊಂಡು ತಾಲೂಕು ಅಮಲ್ದಾರರವರೆಗೆ ಎಲ್ಲಾ ಅಧಿಕಾರಿಗಳೂ ಕ್ರಿಮಿನಲ್ ಮೊಕದ್ದಮೆಗಳ ತೀರ್ಮಾನ ಮಾಡುತ್ತಿದ್ದರು. ೧೮೭೨ರಲ್ಲಿ ಮೈಸೂರು ರಾಜ್ಯದಲ್ಲಿ ಕ್ರಿಮಿನಲ್ ಪ್ರೊಸಿಜರ್ ಕೋಡ್ ಜಾರಿಗೆ ಬಂದಿತು. ೧೮೮೦ರಲ್ಲಿ ಮುನ್ಸೀಫರನ್ನು ಪದನಿಮಿತ್ತ ತಾಲೂಕು ದಂಡಾಧಿಕಾರಿಗಳನ್ನಾಗಿ ನೇಮಿಸಲಾಯಿತು. ೧೮೮೧ರಲ್ಲಿ ಸಂಸ್ಥಾನವು ಮೈಸೂರು ಅರಸರಿಗೆ ಪುನರ್ ಹಸ್ತಾಂತರವಾದಾಗ (ರೆಂಡಿಷನ್), ಕ್ರಿಮಿನಲ್ ನ್ಯಾಯಾಡಳಿತ ಮುಖ್ಯ ನ್ಯಾಯಾಧೀಶರಿಗೆ ದತ್ತವಾಗಿದ್ದಿತು. ಸೆಷನ್ಸ್ ಮತ್ತು ಸಹಾಯಕ ಸೆಷೆನ್ಸ್ ನ್ಯಾಯಾಧೀಶರು, ಜಿಲ್ಲಾ ನ್ಯಾಯಾಧೀಶರು, ಪ್ರಥಮ, ದ್ವಿತೀಯ ಹಾಗೂ ತೃತೀಯ ದರ್ಜೆ ನ್ಯಾಯಾಧೀಶರು ಆ ವೇಳೆಯಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದರು. ಮಂಡ್ಯ ಪ್ರದೇಶವನ್ನೊಳಗೊಂಡ ಮೈಸೂರಿನಲ್ಲಿ ಸೆಷೆನ್ಸ್ ನ್ಯಾಯಾಧೀಶರ ಒಂದು ನ್ಯಾಯಾಲಯ ಕ್ರಿಮಿನಲ್ ಮೊಕದ್ದಮೆಗಳನ್ನು ತೀರ್ಮಾನಿಸುತ್ತಿದ್ದಿತು. ಇದರ ಅಧಿಕಾರ ವ್ಯಾಪ್ತಿ ಮೈಸೂರು ಹಾಗೂ ಹಾಸನ ಜಿಲ್ಲೆಗಳ ಮೇಲೂ ಇದ್ದಿತು.

ಮಂಡ್ಯ ಸ್ವತಂತ್ರ ಜಿಲ್ಲೆಯಾಗುವುದಕ್ಕೂ ಮೊದಲು ಮೈಸೂರಿನ ಜಿಲ್ಲಾ ನ್ಯಾಯಾಧೀಶರು ನ್ಯಾಯಾಡಳಿತದ ವ್ಯವಸ್ಥೆಯ ಅತ್ಯುನ್ನತ ಅಧಿಕಾರಿಯಾಗಿದ್ದರು. ಇವರು ವಾರಕ್ಕೆ ಎರಡು ಬಾರಿ ಮಂಡ್ಯದಲ್ಲಿ ಮೊಕ್ಕಾಂ ಮಾಡಿ 'ಇಟನೆರರಿ ಸಿಟ್ಟಿಂಗ್ಸ್' ನಡೆಸುವ ಮೂಲಕ ಆ ಪ್ರಾಂತದ ಮೊಕದ್ದಮೆಗಳನ್ನು ಇತ್ಯರ್ಥ ಮಾಡುತ್ತಿದ್ದರು. ಸಿವಿಲ್ ಮೊಕದ್ದಮೆಗಳ ತೀರ್ಮಾನಕ್ಕಾಗಿ ಶ್ರೀರಂಗಪಟ್ಟಣ ಹಾಗೂ ಮಂಡ್ಯಗಳಲ್ಲಿ ಸಿವಿಲ್ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಶ್ರೀರಂಗಪಟ್ಟಣದ ಮುನ್ಸೀಫ್ ನ್ಯಾಯಾಲಯವು ಶ್ರೀರಂಗಪಟ್ಟಣ ತಾಲೂಕು, ಕೆ.ಆರ್.ಪೇಟೆ ತಾಲೂಕು ಹಾಗೂ ಟಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯ ಮೇಲೆ ತನ್ನ ಹತೋಟಿ ಹೊಂದಿದ್ದರೂ, ಕಾವೇರಿ ನದಿಯ ದಕ್ಷಿಣ ಪ್ರಾಂತದ ಮೇಲಿನ ಹತೋಟಿಯನ್ನು ಮೈಸೂರಿನ ಎರಡನೇ ಮುನ್ಸೀಫ್ ನ್ಯಾಯಾಲಯ ಹೊಂದಿದ್ದಿತು. ಮಂಡ್ಯದ ಮುನ್ಸೀಫ್ ನ್ಯಾಯಾಲಯವು ನಾಗಮಂಗಲ, ಮಳವಳ್ಳಿ, ಮದ್ದೂರು ಹಾಗೂ ಮಂಡ್ಯ ಪ್ರದೇಶಗಳ ಮೇಲೆ ಹತೋಟಿ ಹೊಂದಿತ್ತು. ಮೈಸೂರಿನ ಸಬಾರ್ಡಿನೇಟ್ ನ್ಯಾಯಾಧೀಶರು ಇಂದಿನ ಮಂಡ್ಯ ಪ್ರದೇಶದಲ್ಲಿ ರೂ. ೨,೫೦೦ ರಿಂದ ೧೦,೦೦೦ ರೂಪಾಯಿ ಮೌಲ್ಯದ ಸಿವಿಲ್ ಪ್ರಕರಣಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಅಧಿಕಾರ ಹೊಂದಿದ್ದರು. ಮ್ಯಾಜಿಸ್ಟ್ರೇಟರಿಂದ ತಮ್ಮ ನ್ಯಾಯಾಲಯಕ್ಕೆ ಕಳುಹಿಸಲ್ಪಟ್ಟ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳನ್ನು ಮೈಸೂರಿನ ಸೆಷನ್ಸ್ ನ್ಯಾಯಾಧೀಶರು ತೀರ್ಮಾನಿಸುತ್ತಿದ್ದರು. ಆಗಿನ ಮೈಸೂರಿನ ಜಿಲ್ಲಾಧಿಕಾರಿಯವರು ಜಿಲ್ಲಾ ದಂಡಾಧಿಕಾರಿಯೂ ಆಗಿದ್ದರು. ಮಂಡ್ಯ ಜಿಲ್ಲೆ ಸ್ವತಂತ್ರ ಸ್ಥಾನಪಡೆಯುವುದಕ್ಕೆ ಮೊದಲು ಮಂಡ್ಯದ ವಿಶೇಷ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮಂಡ್ಯ, ಮಳವಳ್ಳಿ,ಹಾಗೂ ಮದ್ದೂರು ತಾಲೂಕುಗಳ ಮೇಲೆ ಹತೋಟಿ ಹೊಂದಿದ್ದು, ಪಾಂಡವಪುರದ

ವಿಶೇಷ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು, ನಾಗಮಂಗಲ ಹಾಗೂ ಕೆ.ಆರ್.ಪೇಟೆಗಳ ಮೇಲೆ ಹತೋಟಿ ಹೊಂದಿದ್ದಿತು. ಆದರೆ ಶ್ರೀರಂಗಪಟ್ಟಣ ತಾಲೂಕಿನ ಪ್ರಥಮ ದರ್ಜೆ ಮೊಕದ್ದಮೆಗಳನ್ನು ಮೈಸೂರಿನ ವಿಶೇಷ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಹಾಗೂ ದ್ವಿತೀಯ ಹಾಗೂ ತೃತೀಯ ದರ್ಜೆ ಮೊಕದ್ದಮೆಗಳನ್ನು ಪಾಂಡವಪುರದ ವಿಶೇಷ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ತೀರ್ಮಾನಿಸುತ್ತಿತ್ತು. ೧೯೩೯ರಲ್ಲಿ ಮಂಡ್ಯ ಸ್ವತಂತ್ರ ಜಿಲ್ಲೆಯಾದ ನಂತರವೂ ಜಿಲ್ಲೆಯ ನ್ಯಾಯಾಡಳಿತ ಹತೋಟಿ ಮೈಸೂರಿನ ಜಿಲ್ಲಾ ನ್ಯಾಯಾಧೀಶರ ಬಳಿ ಇದ್ದಿತು. ನಂತರದಲ್ಲಿ ಅವರ ಅಧೀನ ನ್ಯಾಯಾಲಯವಾಗಿ ಮಂಡ್ಯದಲ್ಲಿ ಸಬ್–ಜಡ್ಜ್ ನ್ಯಾಯಾಲಯ ಸ್ಥಾಪನೆಯಾಯಿತು. ೧೯೫೬ರ ಜೂನ್ ಒಂದರಂದು ಜಾರಿಯಾದ ೧೯೫೫ರ ಮೈಸೂರು ಕಾಯಿದೆ ೨೩ರಂತೆ, ಮಂಡ್ಯದ ಅಧೀನ ನ್ಯಾಯಾಲಯವನ್ನು ೨೦,೦೦೦ ರೂ ಮೌಲ್ಯದ ಮೊಕದ್ದಮೆಗಳನ್ನು ತೀರ್ಮಾನಿಸುವ ಅಧಿಕಾರವುಳ್ಳ ಸಿವಿಲ್ ನ್ಯಾಯಾಲಯವಾಗಿ ಮಾರ್ಪಡಿಸಲಾಯಿತು. ಅದೇ ಕಾಯ್ದೆಯಂತೆ ಶ್ರೀರಂಗಪಟ್ಟಣ ಹಾಗೂ ಮಂಡ್ಯಗಳ ಮುನ್ಸೀಫ್ ನ್ಯಾಯಾಲಯಗಳ ಆರ್ಥಿಕ ಹತೋಟಿಯನ್ನು ೨೫೦೦ ರಿಂದ ೩೦೦೦ಕ್ಕೆ ಹೆಚ್ಚಿಸಲಾಯಿತು. ೧೯೬೧ ರಲ್ಲಿ ಅಡ್ವೋಕೇಟ್ ಕಾಯ್ದೆ ಜಾರಿಯಾಗಿ 'ಲಾಯರ್' ಪದದ ಬದಲಾಗಿ 'ಅಡ್ವೋಕೇಟ್' ಪದನಾಮ ರೂಢಿಗೆ ಬಂದಿತು.

ಸಿವಿಲ್ ಮುನ್ಸೀಫರು ತೀರ್ಮಾನಿಸಿದ ಸಿವಿಲ್ ಮೊಕದ್ದಮೆಗಳ ಮೇಲ್ಮನವಿ (ಅಫೀಲ್) ಅಧಿಕಾರಿಯಾಗಿ ಸಿವಿಲ್ ನ್ಯಾಯಾಧೀಶರು ನೇಮಿಸಲ್ಪಟ್ಟರು. ಸಿವಿಲ್ ನ್ಯಾಯಾಧೀಶರು ತೀರ್ಮಾನಿಸಿದ ೧೦,೦೦೦ ರೂ.ವರೆಗಿನ ಮೌಲ್ಯದ ಮೊಕದ್ದಮೆಗಳ ಅಪೀಲುಗಳನ್ನು ಜಿಲ್ಲಾ ನ್ಯಾಯಾಲಯ ಸ್ವೀಕರಿಸಿದರೆ, ಮೂಲ ದಾವೆಗಳ ಅಪೀಲುಗಳನ್ನು ಮೈಸೂರಿನ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕಿದ್ದಿತು. ಮಂಡ್ಯ ಸಿವಿಲ್ ನ್ಯಾಯಾಧೀಶರನ್ನು ಮಂಡ್ಯ ಜಿಲ್ಲೆಯ ಜಿಲ್ಲಾ ಜ್ಯುಡಿಷಿಯಲ್ ನ್ಯಾಯಾಧೀಶರಾಗಿ ನೇಮಕ ಮಾಡಿ, ಅವರ ಅಧೀನಕ್ಕೆ ಜಿಲ್ಲೆಯ ಎಲ್ಲಾ ಅಧೀನ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ಸೇರ್ಪಡೆ ಮಾಡಲಾಯಿತು.

ಒಂದನೇ ಅಕ್ಟೋಬರ್ ೧೯೬೫ರಲ್ಲಿ ಜಾರಿಯಾದ ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ (ಮೈಸೂರು ಅಮೆಂಡ್‌ಮೆಂಟ್) ಪ್ರಕಾರ ಜ್ಯುಡಿಷಿಯಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಹುದ್ದೆ ರದ್ದಾಯಿತು. ಹಾಗೂ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ಮೇಲೆ ಅದು ಹೊಂದಿದ್ದ ಹತೋಟಿಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಸೆಷನ್ಸ್ ನ್ಯಾಯಾಧೀಶರಿಗೆ ವರ್ಗಾಯಿಸಲಾಯಿತು. ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆಗಳ ತೀರ್ಮಾನಕ್ಕಾಗಿ ೧೯೬೫ ನವೆಂಬರ್ ಒಂದರಂದು ಮಂಡ್ಯದಲ್ಲಿ ಜಿಲ್ಲಾ ಸತ್ರ ನ್ಯಾಯಾಲಯ ಸ್ಥಾಪನೆಯಾಯಿತು. ಪ್ರಸ್ತುತ ಜಿಲ್ಲೆಯ ನ್ಯಾಯಾಡಳಿತ ಕ್ರಮದ ಅತ್ಯುನ್ನತ ಅಧಿಕಾರಿಯಾಗಿ ಜಿಲ್ಲಾ ಸತ್ರ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಜಿಲ್ಲೆಯು ಕಾನೂನು ಕ್ಷೇತ್ರಕ್ಕೆ ಮಹತ್ವಪೂರ್ಣ ವ್ಯಕ್ತಿಗಳನ್ನು ನೀಡಿರುತ್ತದೆ. ವಕೀಲಿ ವೃತ್ತಿಯಲ್ಲಿ ಜೀವನ ಪ್ರಾರಂಭಿಸಿ, ದೇಶದ ಅತ್ಯುನ್ನತ ಪದವಿಯಾದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಸ್ಥಾನವನ್ನಲಂಕರಿಸಿದ ನ್ಯಾಯಮೂರ್ತಿ ಇ.ಎಸ್.ವೆಂಕಟರಾಮಯ್ಯನವರು ಜಿಲ್ಲೆಯ ಪಾಂಡವಪುರ ತಾಲೂಕಿನ ತಿರುಮಲಸಾಗರ ಛತ್ರದವರು. ಖ್ಯಾತ ನ್ಯಾಯವೇತ್ತರಾದ ಹೊಂಬೇಗೌಡರು ಪಕ್ಕದ ಮೈಸೂರು ಜಿಲ್ಲೆಯಲ್ಲಿ ಜನಿಸಿದರೂ, ತಮ್ಮ ಕಾನೂನು ಕ್ಷೇತ್ರದ ಸಾಧನೆಗಳೆಲ್ಲವನ್ನೂ ಮಂಡ್ಯದಲ್ಲೇ ಮಾಡಿದವರು. ಇದೇ ರೀತಿ ಡಿ. ದೊಡ್ಡಕಾಳೇಗೌಡ, ಸಿ.ಶಿವಪ್ಪ, ಎ.ಜೆ.ಸದಾಶಿವ; ಹಾಲಿ ನ್ಯಾಯಾಮೂರ್ತಿಗಳಾದ ಬಿ.ಎನ್.ಮಲ್ಲಿಕಾರ್ಜುನ್, ಎಸ್,ಆರ್.ವೆಂಕಟೇಶ ಮೂರ್ತಿ ಇವರೆಲ್ಲ ಕಾನೂನು ಕ್ಷೇತ್ರದ ಮೇಧಾವಿಗಳಾಗಿದ್ದು, ಇದೇ ಜಿಲ್ಲೆಗೆ ಸೇರಿದವರಾಗಿರುತ್ತಾರೆ. ೧೯೫೦ರ ದಶಕದಲ್ಲಿ ಖ್ಯಾತನಾಮರಾಗಿದ್ದ ವಕೀಲರೆಂದರೆ, ಬಿ.ಎಂ.ಶ್ರೀ. ಯವರ ಸಹೋದರನಾದ ಬಿ.ಎಂ.ಕೃಷ್ಣಸ್ವಾಮಿ, ಬಿ.ವಿ.ಕೃಷ್ಣನ್, ನರಸಿಂಗರಾವ್, ನಾರಾಯಣಮೂರ್ತಿ, ಎಸ್. ಕೃಷ್ಣರಾವ್, ಶ್ರೀಕಂಠಯ್ಯ ಹಾಗೂ ಪಿ. ಮಲ್ಲಯ್ಯ. ಆ ದಶಕದಲ್ಲಿ ಮಂಡ್ಯದ ಬಾರ್

ಅಸೋಸಿಯೇಷನ್‌ನಲ್ಲಿ ೨೫ ಮಂದಿ ವಕೀಲರು ನೋಂದಣಿಗೊಂಡು ವಕೀಲವೃತ್ತಿ ನಡೆಸುತ್ತಿದ್ದರು. ಪ್ರಸ್ತುತ(೨೦೦೦ ದಲ್ಲಿ) ಇವರ ಸಂಖ್ಯೆ ಸುಮಾರು ೪೫೦ ರಷ್ಟಿದೆ.

ಈ ಮುಂದೆ ಮಂಡ್ಯ ನಗರ ಹಾಗೂ ಜಿಲ್ಲೆಯ ಇತರೆಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ (೨೦೦೨ ರಲ್ಲಿದ್ದಂತೆ) ನ್ಯಾಯಾಲಯಗಳ ಪಟ್ಟಿಯನ್ನು ನೀಡಲಾಗಿದೆ.

೧. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

೨. ಅಪರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ. ಮಂಡ್ಯ.

೩. ಪ್ರಧಾನ ಸಿವಿಲ್ ಜಡ್ಜ್ (ಹಿರಿಯ) ಮತ್ತು ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ನ್ಯಾಯಾಲಯ ಮಂಡ್ಯ.

೪. ಅಪರ ಪ್ರಧಾನ ಸಿವಿಲ್ ಜಡ್ಜ್ (ಹಿರಿಯ) ಮತ್ತು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಯಂ) ನ್ಯಾಯಾಲಯ, ಮಂಡ್ಯ.

೫. ಪ್ರಧಾನ ಸಿವಿಲ್ ಜಡ್ಜ್ (ಕಿರಿಯ) ಮತ್ತು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್‌ಕ್ಲಾಸ್ (ಜೆ.ಎಂ.ಎಫ್.ಸಿ) ನ್ಯಾಯಾಲಯ, ಮಂಡ್ಯ.

೬. ಅಪರ ಪ್ರಧಾನ ಸಿವಿಲ್ ಜಡ್ಜ್ (ಕಿರಿಯ) ಮತ್ತು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್‌ಕ್ಲಾಸ್ (ಜೆ.ಎಂ.ಎಫ್.ಸಿ) ನ್ಯಾಯಾಲಯ, ಮಂಡ್ಯ.

೭. ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್, ಫಸ್ಟ್ ಕ್ಲಾಸ್ ನ್ಯಾಯಾಲಯ, ಮಂಡ್ಯ.

೮. ಸಿವಿಲ್ ನ್ಯಾಯಾಧೀಶ (ಹಿರಿಯ) ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಶ್ರೀರಂಗಪಟ್ಟಣ.

೯. ಅಪರ ಸಿವಿಲ್ ನ್ಯಾಯಾಧೀಶರ (ಹಿರಿಯ) ನ್ಯಾಯಾಲಯ,ಮತ್ತು ಜೆ.ಎಂ.ಎಫ್.ಸಿ. ಶ್ರೀರಂಗಪಟ್ಟಣ.

೧೦. ಅಪರ ಸಿವಿಲ್ ನ್ಯಾಯಾಧೀಶರ (ಹಿರಿಯ) ನ್ಯಾಯಾಲಯ, ಶ್ರೀರಂಗಪಟ್ಟಣ.

೧೧. ಸಿವಿಲ್ ನ್ಯಾಯಾಧೀಶರ(ಕಿರಿಯ) ನ್ಯಾಯಾಲಯ, ಶ್ರೀರಂಗಪಟ್ಟಣ.

೧೨. ಅಪರ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ, ಹಾಗೂ ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

೧೩. ಸಿವಿಲ್ ನ್ಯಾಯಾಧೀಶರ (ಹಿರಿಯ) ನ್ಯಾಯಾಲಯ, ಮದ್ದೂರು.

೧೪. ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಮದ್ದೂರು.

೧೫. ಅಪರ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಮದ್ದೂರು.

೧೬. ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಕೃಷ್ಣರಾಜಪೇಟೆ.

೧೭. ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಮಳವಳ್ಳಿ.

೧೮. ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಮಳವಳ್ಳಿ.

೧೯. ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ.

೨೦. ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.

೧೯೯೭-೯೮ ರಿಂದ ೨೦೦೧-೨೦೦೨ರ ವರೆಗೆ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಹಾಗೂ ತೀರ್ಮಾನವಾದ ದಾವೆಗಳ ಮತ್ತು ಖರ್ಚು ವೆಚ್ಚಗಳ ವಿವರಗಳನ್ನು ಈ ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

### ಕೋಷ್ಟಕ ೧೦.೧ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭-೯೮ | ೧೯೯೬ | ೨೭೦೦ | ೧೦೭೯೨೧-೪೦ | ೩೯೧೫೮೨೭/- |
| ೨ | ೧೯೯೮-೯೯ | ೦೯೬೩ | ೨೨೭೭ | ೧೪೭೬೭೫-೨೫ | ೪೪೬೬೬೨೦/- |
| ೩ | ೧೯೯೯-೨೦೦೦ | ೧೯೨೪ | ೧೭೮೪ | ೧೩೪೮೯೦-೦೦ | ೭೧೫೪೪೮೪/- |
| ೪ | ೨೦೦೦-೨೦೦೧ | ೧೫೭೪ | ೧೬೨೯ | ೧೨೩೫೪೧-೯೦ | ೪೬೮೨೨೮೧/- |
| ೫ | ೨೦೦೧-೨೦೦೨ | ೧೮೭೮ | ೧೬೪೯ | ೯೭೩೨೧-೩೫ | ೫೧೦೮೮೨೫/- |

ವಿಶೇಷ ಸೂಚನೆ : ಎಲ್ಲಾ ಕೋಷ್ಟಕಗಳಲ್ಲಿರುವ 'ತೀರ್ಮಾನವಾದ ದಾವೆಗಳು' ಕಾಲಂ ನಲ್ಲಿ ಹಳೆಯ ಪ್ರಕರಣಗಳೂ ಸೇರಿವೆ.

### ಕೋಷ್ಟಕ ೧೦.೨ ಅಪರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | **ಆಯ** | **ವ್ಯಯ** |
|---|---|---|---|---|---|
| ೧ | ೧೯೯೭-೧೯೯೮ | ೬೨೦ | ೧೪೨೨ | ಈ ನ್ಯಾಯಾಲಯದ ಆಯವ್ಯಯವನ್ನು ಪ್ರಧಾನ ನ್ಯಾಯಾಲಯದ ವ್ಯಾಪ್ತಿಗೊಳಪಡಿಸಿದೆ. | |
| ೨ | ೧೯೯೮-೧೯೯೯ | ೬೦೨ | ೯೦೯ | | |
| ೩ | ೧೯೯೯-೨೦೦೦ | ೪೪೬ | ೭೬೮ | | |
| ೪ | ೨೦೦೦-೨೦೦೧ | ೬೨೦ | ೯೩೦ | | |
| ೫ | ೨೦೦೧-೨೦೦೨ | ೭೫೨ | ೮೪೯ | | |

**ಕೋಷ್ಟಕ ೧೦.೩ ಪ್ರಧಾನ ಸಿವಿಲ್ ಜಡ್ಜ್ (ಹಿರಿಯ) ಮತ್ತು ಸಿಜೆಎಂ ನ್ಯಾಯಾಲಯ, ಮಂಡ್ಯ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೨೫೦೪ | ೯೬೪ | ೧೮೦೩೫೧೭–೨೫ | ೧೮೧೯೯೬–೦೦ |
| ೨ | ೧೯೯೮–೧೯೯೯ | ೧೫೯೦ | ೪೯೧ | ೧೧೮೯೫೦೨–೦೦ | ೨೧೯೪೩೬೯–೦೦ |
| ೩ | ೧೯೯೯–೨೦೦೦ | ೧೦೧೩ | ೩೭೯೫ | ೧೨೬೩೨೨೫–೦೦ | ೨೩೨೫೭೦–೦೦ |
| ೪ | ೨೦೦೦–೨೦೦೧ | ೭೪೦ | ೩೦೪ | ೧೦೨೨೪೪೧–೦೦ | ೧೫೦೨೮೭೫–೦೦ |
| ೫ | ೨೦೦೧–೨೦೦೨ | ೬೪೩ | ೧೩೫೪ | ೨೫೫೩೩೭–೦೦ | ೨೮೩೪೯೦೦–೦೦ |

**ಕೋಷ್ಟಕ ೧೦–೪ ಅಪರ ಪ್ರಧಾನ ಸಿವಿಲ್ ಜಡ್ಜ್(ಹಿರಿಯ) ಮತ್ತು ಸಿಜೆಎಂ ನ್ಯಾಯಾಲಯ, ಮಂಡ್ಯ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು |
|---|---|---|---|
| ೧ | ೧೯೯೭–೧೯೯೮ | ೭೮೧ | ೪೬೫ |
| ೨ | ೧೯೯೮–೧೯೯೯ | ೬೧೭ | ೪೨೮ |
| ೩ | ೧೯೯೯–೨೦೦೦ | ೫೮೭ | ೨೩೮ |
| ೪ | ೨೦೦೦–೨೦೦೧ | ೬೫೬ | ೩೧೦ |
| ೫ | ೨೦೦೧–೨೦೦೨ | ೮೦೦ | ೩೩೩ |

**ಕೋಷ್ಟಕ ೧೦–೫ ಪ್ರಧಾನ ಸಿವಿಲ್ ಜಡ್ಜ್ (ಕಿರಿಯ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಂಡ್ಯ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೭೨೧ | ೪೩೪(೪೮) | ೨,೮೭,೭೯೬.೦೦ | ೧೭,೩೭,೯೫೪.೦೦ |
| ೨ | ೧೯೯೮–೧೯೯೯ | ೫೦೦ (೧೨೮.Trd) | ೯೫೪(೬೮) | ೩,೭೫,೦೭೪.೦೦ | ೧೯,೪೫,೮೧೬.೦೦ |
| ೩ | ೧೯೯೯–೨೦೦೦ | ೩೦೮ | ೩೪೦(೮೫) | ೨,೪೫,೧೭೯.೦೦ | ೧೮,೬೩,೩೧೧.೦೦ |
| ೪ | ೨೦೦೦–೨೦೦೧ | ೩೨೭ | ೫೧೪(೮೫) | ೫,೮೨,೯೫೯.೦೦ | ೨೦,೩೨,೬೧೭.೦ |
| ೫ | ೨೦೦೧–೨೦೦೨ | ೮೮೯ | ೯೮೮(೧೦೮) | ೩,೮೮,೨೬೨.೦೦ | ೨೭,೬೬,೦೨೦.೦೦ |

Trd - ವರ್ಗಾವಣೆಗೊಂಡವು

**ಕೋಷ್ಟಕ ೧೦–೬ ಅಪರ ಪ್ರಧಾನ ಸಿವಿಲ್ ಜಡ್ಜ್ (ಕಿರಿಯ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಂಡ್ಯ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು |
|---|---|---|---|
| ೧ | ೧೯೯೭–೧೯೯೮ | ೫೮೪೨ | ೯೦೮೪(೩೯೮)<br>(೬೯೫೪ Trd) |
| ೨ | ೧೯೯೮–೧೯೯೯ | ೧೦೯೪(೭೬೪ Trd) | ೨೬೯(೫೬) |
| ೩ | ೧೯೯೯–೨೦೦೦ | ೮೯೪ | ೩೪೮(೮೩) |
| ೪ | ೨೦೦೦–೨೦೦೧ | ೪೩೨(೨RF) | ೫೮೨(೧೦೦) |
| ೫ | ೨೦೦೧–೨೦೦೨ | ೬೬೮ | ೭೪೪(೧೨೯) |

Trd - ವರ್ಗಾವಣೆಗೊಂಡವು Rf : ಮರು ದಾಖಲಾತಿಯಾದವು

**ಕೋಷ್ಟಕ ೧೦–೭ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾಸ್ ನ್ಯಾಯಾಲಯ, ಮಂಡ್ಯ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | – | – | – | – |
| ೨ | ೧೯೯೮–೧೯೯೯ | ೧೬೬೩ | ೧೯೭೮ | ೭೧೭೦೮೪.೦೦ | |
| ೩ | ೧೯೯೯–೨೦೦೦ | ೨೩೮೭ | ೪೭೪೮ | ೧೨,೨೬,೨೮೧.೦೦ | |
| ೪ | ೨೦೦೦–೨೦೦೧ | ೧೯೧೫ | ೪೦೪೬ | ೧೦,೮೪,೬೭೧.೦೦ | |
| ೫ | ೨೦೦೧–೨೦೦೨ | ೧೭೪೩ | ೨೪೫೫ | ೧೧,೮೪,೯೨೪.೦೦ | |

**ಕೋಷ್ಟಕ ೧೦–೮ ಪ್ರಧಾನ ಸಿವಿಲ್ ನ್ಯಾಯಾಧೀಶರ (ಹಿರಿಯ) ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಶ್ರೀರಂಗಪಟ್ಟಣ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು |
|---|---|---|---|
| ೧ | ೧೯೯೭–೧೯೯೮ | ೧೦೭ | ೧೦೩ |
| ೨ | ೧೯೯೮–೧೯೯೯ | ೧೦೫ | ೩೭ |
| ೩ | ೧೯೯೯–೨೦೦೦ | ೬೩ | ೯೮ |
| ೪ | ೨೦೦೦–೨೦೦೧ | ೧೦೯ | ೬೭ |
| ೫ | ೨೦೦೧–೨೦೦೨ | ೧೦೨ | ೯೯ |

**ಕೋಷ್ಟಕ ೧೦-೯ ಅಪರ ಪ್ರಧಾನ ಸಿವಿಲ್ ನ್ಯಾಯಾಧೀಶರ (ಹಿರಿಯ) ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ ಶ್ರೀರಂಗಪಟ್ಟಣ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭-೧೯೯೮ | ೧೫೮೫ | ೨೧೯೮ | ೪,೩೪,೭೨೬.೯೫ | ೨೫,೯೬,೮೪೧-೦೦ |
| ೨ | ೧೯೯೮-೧೯೯೯ | ೧೫೭೧ | ೧೬೯೫ | ೫,೨೬,೮೮೫.೨೫ | ೩೪,೦೫,೨೦೪-೦೦ |
| ೩ | ೧೯೯೯-೨೦೦೦ | ೧೧೮೭ | ೧೮೬೭ | ೪,೪೩,೫೧೮.೦೦ | ೨೯,೪೫,೧೬೮-೦೦ |
| ೪ | ೨೦೦೦-೨೦೦೧ | ೧೧೦೬ | ೧೦೫೦ | ೫.೨೬,೮೮೩.೨೫ | ೩೪,೦೫,೨೦೬-೦೦ |
| ೫ | ೨೦೦೧-೨೦೦೨ | ೧೧೧೨ | ೮೧೧ | ೬,೫೮,೧೦೮.೦೦ | ೩೨,೭೮,೭೧೬-೦೦ |

**ಕೋಷ್ಟಕ ೧೦-೧೦ ಅಪರ ಸಿವಿಲ್ ನ್ಯಾಯಾಧೀಶ (ಹಿರಿಯ) ನ್ಯಾಯಾಲಯ, ಶ್ರೀರಂಗಪಟ್ಟಣ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭-೧೯೯೮ | ೧೬೦೭ | ೩೮೯ | ಸಂಬಂಧಿಸುವುದಿಲ್ಲ | |
| ೨ | ೧೯೯೮-೧೯೯೯ | ೧೧೩೭ | ೬೪೪ | | |
| ೩ | ೧೯೯೯-೨೦೦೦ | ೬೨೫ | ೪೮೫ | | |
| ೪ | ೨೦೦೦-೨೦೦೧ | ೩೭೫ | ೧೧೫೫ | | |
| ೫ | ೨೦೦೧-೨೦೦೨ | ೩೫೬ | ೩೧೮ | | |

**ಕೋಷ್ಟಕ ೧೦-೧೧ ಸಿವಿಲ್ ನ್ಯಾಯಾಧೀಶ (ಕಿರಿಯ) ನ್ಯಾಯಾಲಯ, ಶ್ರೀರಂಗಪಟ್ಟಣ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭-೧೯೯೮ | ೬೭೫ | ೫೮ | ೧,೮೯,೪೨೬.೦೦ | ೧೦,೬೩,೮೧೯.೦೦ |
| ೨ | ೧೯೯೮-೧೯೯೯ | ೬೪೦ | ೪೪ | ೧,೭೬,೩೦೮ | ೯,೭೦,೬೯೬.೦೦ |
| ೩ | ೧೯೯೯-೨೦೦೦ | ೨೬೮ | ೫೧ | ೮೦,೬೨೭.೦೦ | ೧೩,೩೫,೫೯೭.೦೦ |
| ೪ | ೨೦೦೦-೨೦೦೧ | ೩೨೩ | ೮೭ | ೧,೩೭,೮೩೩.೦೦ | ೧೨,೯೧,೮೮೫.೦೦ |
| ೫ | ೨೦೦೧-೨೦೦೨ | ೨೮೫ | ೩೪ | ೧,೨೨,೮೩೭.೫೦ | ೧೫,೯೪,೪೬೭.೦೦ |

## ಕೋಷ್ಟಕ ೧೦–೧೨ ಅಪರ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೩೪೧೦ | ೧೪೯೮ | ೬೪೪೪.೫೦ | ೮,೭೦,೦೩೪ |
| ೨ | ೧೯೯೮–೧೯೯೯ | ೧೭೧೮ | ೧೩೭೩ | ೧೧೧೮೧.೫೦ | ೭,೯೭,೫೦೯ |
| ೩ | ೧೯೯೯–೨೦೦೦ | ೯೨೮ | ೨೯೩೨ | ೩೭೮೦.೫೦ | ೯,೫೫,೧೫೫ |
| ೪ | ೨೦೦೦–೨೦೦೧ | ೬೭೨ | ೧೪೧೦ | ೪೩೨೧.೦೦ | ೧೦,೫೫,೬೭೫ |
| ೫ | ೨೦೦೧–೨೦೦೨ | ೭೨೮ | ೧೨೩೪ | ೪೪೩೭.೦೦ | ೧೧,೨೯,೫೦೩ |

## ಕೋಷ್ಟಕ ೧೦.೧೩ ಸಿವಿಲ್ ನ್ಯಾಯಾಧೀಶರ (ಹಿರಿಯ) ನ್ಯಾಯಾಲಯ, ಮದ್ದೂರು.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | – | – | – | – |
| ೨ | ೧೯೯೮–೧೯೯೯ | – | – | – | – |
| ೩ | ೧೯೯೯–೨೦೦೦ | ೧೦೨ (filings)<br>೧೨೯೮ (Transfer) | ೮೪ | ೧,೦೫,೮೯೮.೦೦ | ೪,೩೦,೧೬೮.೦೦ |
| ೪ | ೨೦೦೦–೨೦೦೧ | ೬೭೦ | ೪೫೨ | ೬,೦೩,೦೮೭.೦೦ | ೧೭,೧೫,೧೬೬.೦೦ |
| ೫ | ೨೦೦೧–೨೦೦೨ | ೬೯೨ | ೪೫೭ | ೫,೮೧,೬೨೯.೦೦ | ೨೧,೨೯,೦೭೭.೦೦ |

## ಕೋಷ್ಟಕ ೧೦.೧೪ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್. ಸಿ. ಮದ್ದೂರು.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | | ತೀರ್ಮಾನವಾದ ದಾವೆಗಳು | | ಆಯ | | ವ್ಯಯ | |
|---|---|---|---|---|---|---|---|---|---|
| | | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ |
| ೧ | ೧೯೯೭–೧೯೯೮ | ೨೯೦ | ೬೯೩ | ೨೭೫ | ೫೮೯ | ೨,೯೦,೧೫೪.೦೦ | ೮೦೦೦.೦೦ | ೮,೪೬,೬೬೭.೦೦ | – |
| ೨ | ೧೯೯೮–೧೯೯೯ | ೧೬೯ | ೬೭೫ | ೨೦೪ | ೭೦೦ | ೮೭,೬೪೦.೦೦ | ೨೬೨೯.೦೦ | ೯,೪೮,೦೯೯.೦೦ | – |
| ೩ | ೧೯೯೯–೨೦೦೦ | ೧೩೫ | ೭೮೦ | ೬೧೨ | ೮೭೦ | ೧,೩೮,೨೬೪.೦೦ | ೭೬೦೦.೦೦ | ೧೧,೮೪,೪೬೩.೦೦ | – |
| ೪ | ೨೦೦೦–೨೦೦೧ | ೧೫೦ | ೭೯೩ | ೨೭೦ | ೭೩೩ | ೭೩,೪೬೨.೦೦ | ೪೭೭೬.೦೦ | ೧೨,೯೦,೨೧೦.೦೦ | – |
| ೫ | ೨೦೦೧–೨೦೦೨ | ೧೫೦ | ೭೫೫ | ೧೭೮ | ೧೦೨೮ | ೯೪,೨೪೦.೦೦ | ೫೨೯೮.೦೦ | ೧೭,೪೧,೯೪೫.೦೦ | – |

**ಕೋಷ್ಟಕ ೧೦.೧೫ ಅಪರ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ಮದ್ದೂರು.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | | ತೀರ್ಮಾನವಾದ ದಾವೆಗಳು | | ಆಯ | | ವ್ಯಯ | |
|---|---|---|---|---|---|---|---|---|---|
| | | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ |
| ೧ | ೧೯೯೭–೧೯೯೮ | ೨೯೦ | ೪೦೧ | ೨೦೪ | ೫೭೫ | ೨,೨೮,೬೨೨.೦೦ | ೭,೪೨೦.೦೦ | ೪,೨೩,೨೮೪.೦೦ | – |
| ೨ | ೧೯೯೮–೧೯೯೯ | ೧೬೦ | ೪೦೦ | ೧೬೦ | ೪೭೦ | ೬೫,೦೭೧.೦೦ | ೨,೩೪೦.೦೦ | ೪,೭೪,೦೫೦.೦೦ | – |
| ೩ | ೧೯೯೯–೨೦೦೦ | ೧೨೦ | ೪೧೫ | ೪೮೦ | ೩೮೭ | ೧,೭೮,೪೯೦ | ೫,೩೬೦.೦೦ | ೫,೯೧,೮೩೧.೦೦ | – |
| ೪ | ೨೦೦೦–೨೦೦೧ | ೧೫೦ | ೪೯೦ | ೧೯೨ | ೬೭೦ | ೬೨,೪೯೦.೦೦ | ೪,೨೭೦.೦೦ | ೬,೪೫,೧೦೫.೦೦ | – |
| ೫ | ೨೦೦೧–೨೦೦೨ | ೧೫೦ | ೬೯೨ | ೧೪೭ | ೭೩೬ | ೯೨,೧೦೪.೦೦ | ೩,೨೪೦.೦೦ | ೧,೯೩,೫೪೯.೦೦ | – |

**ಕೋಷ್ಟಕ ೧೦.೧೬ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್. ಸಿ, ಕೃಷ್ಣರಾಜಪೇಟೆ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೨೮೨ | ೧೮೬ | ೧೨೬೯೧೯.೦೦ | ೧೨,೫೩,೪೫೫.೦೦ |
| ೨ | ೧೯೯೮–೧೯೯೯ | ೨೬೭ | ೧೫೯ | ೨೦೫೯೯೦.೦೦ | ೧೪,೬೦,೩೬೪.೦೦ |
| ೩ | ೧೯೯೯–೨೦೦೦ | ೨೩೬ | ೧೦೯ | ೧೦೬೪೭೭.೦೦ | ೧೬,೨೫,೩೪೦.೦೦ |
| ೪ | ೨೦೦೦–೨೦೦೧ | ೨೧೯ | ೬೯ | ೧೦೭೪೪೧.೦೦ | ೧೫,೯೯,೪೨೮.೦೦ |
| ೫ | ೨೦೦೧–೨೦೦೨ | ೨೩೧ | ೧೧೮ | ೪೯೯೧೨.೦೦ | ೧೫,೮೮,೯೨೩.೦೦ |

**ಕೋಷ್ಟಕ ೧೦.೧೭ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ಮಳವಳ್ಳಿ.**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೨೭೬ | ೩೨೯ | ೮೨೮೨೭.೦೦ | ೧೧೩೩೭೪೦.೦೦ |
| ೨ | ೧೯೯೮–೧೯೯೯ | ೪೨೯ | ೩೩೪ | ೧೧೨೪೯೧.೧೦ | ೨೭೨೬೦೫೯.೦೦ |
| ೩ | ೧೯೯೯–೨೦೦೦ | ೪೯೫ | ೨೮೧ | ೯೮೩೨೦.೦೦ | ೧೫೮೩೫೧೪.೦೦ |
| ೪ | ೨೦೦೦–೨೦೦೧ | ೨೬೯ | ೪೧೩ | ೮೪೦೪೬.೦೦ | ೧೭೦೫೯೭೩.೦೦ |
| ೫ | ೨೦೦೧–೨೦೦೨ | ೩೧೩ | ೫೧೦ | ೧೧೧೯೭೭.೦೦ | ೧೮೫೮೨೧೫.೦೦ |

### ಕೋಷ್ಟಕ ೧೦.೧೮ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ., ಮಳವಳ್ಳಿ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೧೧೫೪ | ೭೩೭ | ೪೨೨೮.೨೫ | ಸಿವಿಲ್ ದಾಖಲೆಯಲ್ಲಿದ್ದಂತೆ |
| ೨ | ೧೯೯೮–೧೯೯೯ | ೯೨೯ | ೧೨೭೬ | ೩೦೨೭.೦೦ | |
| ೩ | ೧೯೯೯–೨೦೦೦ | ೯೨೯ | ೬೪೯ | ೩೨೬೦.೩೩ | |
| ೪ | ೨೦೦೦–೨೦೦೧ | ೭೯೫ | ೭೨೭ | ೩೨೬೦.೦೦ | |
| ೫ | ೨೦೦೧–೨೦೦೨ | ೯೯೪ | ೧೧೩೧ | ೪೯೩೫.೦೦ | |

### ಕೋಷ್ಟಕ ೧೦.೧೯ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ನಾಗಮಂಗಲ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೧೨೫೮ | ೧೮೩೭ | ೪೮,೫೮೮.೦೦ | ೧೩,೨೦,೩೦೫.೦೦ |
| ೨ | ೧೯೯೮–೧೯೯೯ | ೯೩೩ | ೧೧೯೨ | ೧,೭೬,೬೧೦.೦೦ | ೧೪,೧೯,೪೨೧.೦೦ |
| ೩ | ೧೯೯೯–೨೦೦೦ | ೬೬೪ | ೮೯೫ | ೫೫,೨೪೨.೦೦ | ೧೬,೧೪,೮೪೮.೦೦ |
| ೪ | ೨೦೦೦–೨೦೦೧ | ೧೩೬೧ | ೧೧೧೯ | ೫೩,೮೪೭.೦೦ | ೨,೧೦,೭೯೫.೦೦ |
| ೫ | ೨೦೦೧–೨೦೦೨ | ೧೨೬೩ | ೧೦೪೮ | ೩,೭೧,೧೯೯.೦೦ | ೨೦,೬೬,೯೮೭.೦೦ |

### ಕೋಷ್ಟಕ ೧೦.೨೦ ಸಿವಿಲ್ ನ್ಯಾಯಾಧೀಶರ (ಕಿರಿಯ) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ಪಾಂಡವಪುರ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ | ವ್ಯಯ |
|---|---|---|---|---|---|
| ೧ | ೧೯೯೭–೧೯೯೮ | ೨೧೦೬ | ೫೮ | ೨೦,೧೭೨.೦೦ | – |
| ೨ | ೧೯೯೮–೧೯೯೯ | | | ೧,೦೯,೯೩೯.೦೦ | ೨,೦೮,೬೨೯.೦೦ |
| ೩ | ೧೯೯೯–೨೦೦೦ | ೧೧೫೫ | ೩೧೧ | ೧,೪೯,೭೩೫.೦೦ | ೧೬,೦೭,೫೭೪.೦೦ |
| ೪ | ೨೦೦೦–೨೦೦೧ | ೮೮೧ | ೧೧೬೦ | ೧,೫೨,೭೨೧.೦೦ | ೨೨,೨೨,೨೧೦.೦೦ |
| ೫ | ೨೦೦೧–೨೦೦೨ | ೯೨೧ | ೧೨೭೮ | – | – |

## ಪೋಲಿಸ್ ಆಡಳಿತ

ಬಾರಾಬಲೂತಿ: ಆಧುನಿಕ ಪೋಲಿಸ್ ವ್ಯವಸ್ಥೆ ಜಾರಿಗೆ ಬರುವ ಮೊದಲು ಬಾರಾಬಲೂತಿ ಅಥವಾ ಅಯಗಾರ ವ್ಯವಸ್ಥೆಯಡಿ ಪೋಲಿಸ ಕರ್ತವ್ಯಗಳನ್ನು ಗ್ರಾಮನೌಕರರು ನಿರ್ವಹಿಸುತ್ತಿದ್ದರು. ಮರಾಠಿಯಲ್ಲಿ ಬಾರಾಬಲೂತಿ ಎಂದೂ, ಮೈಸೂರು ರಾಜ್ಯದಲ್ಲಿ ಅಯಗಾರ ಪದ್ಧತಿ ಎಂದೂ ಕರೆಯಲ್ಪಡುತ್ತಿದ್ದ ಈ ವ್ಯವಸ್ಥೆಯಲ್ಲಿ ಗ್ರಾಮಜೀವನದ ಹನ್ನೆರಡು ಪ್ರಮುಖ ಉದ್ಯೋಗಗಳ ಪ್ರತಿನಿಧಿಗಳನ್ನು ಹೆಸರಿಸಲಾಗಿದೆ. ಅವರೆಂದರೆ–ಗೌಡ ಅಥವಾ ಪಟೇಲ (ಗ್ರಾಮ ಮುಖಂಡ), ಶಾನುಭೋಗ (ಗ್ರಾಮ ಲೆಕ್ಕಪತ್ರಗಳನ್ನು ಇಡುವ ಕರಣಿಕ ಅಥವಾ ಗುಮಾಸ್ತ) ತೋಟಿ ಅಥವಾ ತಳವಾಡಿ (ಹಳ್ಳಿ ಕಾವಲುಗಾರ), ತಳವಾರ ಅಥವಾ ಸ್ಥಳವಾರ (ಗ್ರಾಮದ ಆರಕ್ಷಕ) ನೀರುಗಂಟಿ (ಜಮೀನುಗಳಿಗೆ ನೀರು ಪೂರೈಸುವವನು), ಕಮ್ಮಾರ (ಕಬ್ಬಿಣದಿಂದ ಕೃಷಿ ಉಪಕರಣ ತಯಾರಿಸುವವನು), ಬಡಗಿ (ಮರಗೆಲಸದವ), ಕುಂಬಾರ (ಮಣ್ಣಿನ ಕುಡಿಕೆ/ಮಡಕೆ ತಯಾರಿಸುವವ), ಚಮ್ಮಾರ (ಚರ್ಮಗಾರ–ಚಪ್ಪಲಿ ತಯಾರಿಸುವವನು), ನಾಯಿಂದ (ಕ್ಷೌರಿಕ/ ಹಜಾಮ), ಅಗಸ(ಧೋಬಿ) ಹಾಗೂ ಪುರೋಹಿತ (ಪೂಜಾರಿ ಅಥವಾ ಪುರದ ಹಿತವನ್ನು ಬಯಸುವವನು) ಇವರೆಲ್ಲ ಆ ಗ್ರಾಮದ ಜನರ ಸಹಬಾಳ್ವೆಯ ಆಧಾರ ಸ್ತಂಭಗಳಾಗಿದ್ದರು. ಗ್ರಾಮ ಮಟ್ಟದಲ್ಲಿ ಪೋಲಿಸ್ ಕೆಲಸವನ್ನು ತಳವಾರ ಅಥವಾ ತೋಟಿ ನಡೆಸುತ್ತಿದ್ದರು. ಗೌಡ ಅಥವಾ ಶಾನುಭೋಗರು ಗ್ರಾಮದ ಪ್ರತಿನಿಧಿಗಳಾಗಿದ್ದು, ತಮ್ಮ ಮೇಲಿನ ಸರ್ಕಾರಿ ಅಧಿಕಾರಿಗಳೊಡನೆ ಸಂಪರ್ಕ ಇಟ್ಟುಕೊಂಡಿದ್ದರು.

ಉಂಬಳಿ, ಇನಾಂ ಅಥವಾ ಜೋಡಿ ಗ್ರಾಮಗಳಲ್ಲಿ ಅವುಗಳ ಯಜಮಾನರೇ ತಮ್ಮ ವಲಯಗಳಲ್ಲಿ ಪೋಲಿಸ್ ವ್ಯವಸ್ಥೆ ಏರ್ಪಡಿಸುತ್ತಿದ್ದರು. ಇಲ್ಲಿಯೂ ವಂಶಪಾರಂಪರ್ಯವಾದ ಕಾವಲುಗಾರರ ಪಡೆ ಇದ್ದು. ತಮ್ಮ ಪ್ರದೇಶದ ಜನರ ಎಲ್ಲಾ ಆಸ್ತಿಪಾಸ್ತಿಗಳ ರಕ್ಷಣಾ ಹೊಣೆ ಅವರ ಮೇಲಿದ್ದಿತು. ಮುಮ್ಮಡಿ ಕೃಷ್ಣದೇವರಾಜ ಒಡೆಯರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಪೋಲಿಸ್ ಕೆಲಸಗಳನ್ನು ನಿರ್ವಹಿಸುವ ವ್ಯಕ್ತಿಗಳಿಗೆ ಪ್ರತ್ಯೇಕ ಇನಾಂ ಭೂಮಿಯನ್ನು ನೀಡಲಾಗುತ್ತಿತ್ತು. ಇದನ್ನು 'ಅಮರ್‌ಗಾರ್' ಎಂದು ಕರೆಯುತ್ತಿದ್ದರು. ಕಳ್ಳರನ್ನು ಕಳ್ಳರೇ ಸುಲಭವಾಗಿ ಹಿಡಿಯಬಹುದೆಂಬ ಸತ್ಯವನ್ನರಿತ ಅಂದಿನ ಪದ್ಧತಿಯಲ್ಲಿ ಕಳ್ಳತನವನ್ನೇ ಕಸುಬಾಗಿಸಿಕೊಂಡಿದ್ದ ಕಳ್ಳ ಕೊರಮ' ವರ್ಗವನ್ನು ಸರ್ಕಾರ ಬೇಹುಗಾರಿಕೆಯ ಕಾರ್ಯಕ್ಕೆ ಬಳಸುತ್ತಿದ್ದಿತು.

ಅಳಿಯ ರಾಮರಾಯನ ಆಡಳಿತದಡಿ ಒಂದು ಬೇಹುಗಾರಿಕೆ ವಿಭಾಗ ರಚಿತವಾಗಿದ್ದು, ಅದಕ್ಕೆ ಒಬ್ಬ ಅಧೀಕ್ಷಕನು ಮುಖ್ಯಸ್ಥನಾಗಿದ್ದನು. ಮೈಸೂರು ಒಡೆಯ ಚಿಕ್ಕದೇವರಾಯರ ಆಡಳಿತದಲ್ಲಿ ಸರ್ಕಾರದ ಆಡಳಿತವನ್ನು ವಿಕೇಂದ್ರೀಕರಿಸಿ ೧೮ ಇಲಾಖೆಗಳಿಗೆ ಹಂಚಲಾಗಿತ್ತು. ಪೋಲಿಸ್ ಇಲಾಖೆ 'ಪಟ್ಟದ ಚಾವಡಿ' ಎಂದು ಕರೆಯಲ್ಪಡುತ್ತಿತ್ತು. ಹೈದರಾಲಿ ಹಾಗೂ ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ರಾಜ್ಯದ ಗಡಿಪ್ರದೇಶಗಳಲ್ಲಿ ಬೇಹುಗಾರರನ್ನು ನಿಯೋಜಿಸಲಾಯಿತು. ಶ್ರೀರಂಗಪಟ್ಟಣದ ಪತನಾನಂತರ (೧೭೯೯) ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಪ್ರತೀ ತಾಲೂಕಿನ ಪೋಲಿಸ್ ಅಧಿಕಾರಿಯಾಗಿ ಅಮಲ್ದಾರನು ಕಾರ್ಯನಿರ್ವಹಿಸುತ್ತಿದ್ದು, ನಾಗರಿಕರು ನೀಡಿದ ಎಲ್ಲಾ ರೀತಿಯ ದೂರುಗಳನ್ನು ದಾಖಲಿಸಿಕೊಂಡು ಪರಿಶೀಲಿಸುವ ಹಾಗೂ ತೀರ್ಮಾನಿಸುವ ಅಧಿಕಾರವನ್ನು ಹೊಂದಿದ್ದನು. ಈತನೊಡನೆ ಸಹಕರಿಸಲು 'ಕಂದಚಾರ'ರೆಂಬ ಸಶಸ್ತ್ರ ಸಿಪಾಯಿಗಳೂ ಇದ್ದು, ಅವರು ನಾಗರಿಕರ ಜೀವ ಹಾಗೂ ಆಸ್ತಿಗಳಿಗೆ ರಕ್ಷಣೆ ನೀಡುತ್ತಿದ್ದರು. ಅನಿವಾರ್ಯ ಪರಿಸ್ಥಿತಿಗಳಲ್ಲಿ ಕಂದಚಾರರನ್ನು ಸೈನ್ಯಕ್ಕೂ ನಿಯೋಜಿಸಲಾಗುತ್ತಿತ್ತು. ಈ ಕಂದಚಾರ ಪೋಲಿಸ್ ವ್ಯವಸ್ಥೆ ೧೮೩೧ರಲ್ಲಿ ಬ್ರಿಟಿಷ್ ಕಮೀಷನ್ ಆಡಳಿತ ಪ್ರಾರಂಭವಾಗುವವರೆಗೂ ಜಾರಿಯಲ್ಲಿದ್ದಿತು. ೧೮೩೪ರಲ್ಲಿ ಬ್ರಿಟಿಷ್ ಕಮೀಷನ್ನರು ಒಂದು 'ಹುಕುಂ ನಾಮೆ' (ಸರ್ಕಾರಿ ಆಜ್ಞೆ) ಹೊರಡಿಸಿ ಕಂದಚಾರ್ ಪೋಲಿಸರ ದಿನನಿತ್ಯದ ಆಡಳಿತ ವ್ಯವಸ್ಥೆಗೆ ಒಂದು ವೈಜ್ಞಾನಿಕ ಆಯಾಮ ನೀಡಿದರು. ಆ ಆಜ್ಞೆಯಲ್ಲಿ ಕಂದಚಾರ್ ಸಿಪಾಯಿಗಳು ಪ್ರತ್ಯೇಕ ಪೋಲಿಸ್

ದಳಕ್ಕೆ ಸೇರಿದವರೆಂದು ನಿಗದಿಪಡಿಸಲಾಯಿತು. ಈ ಸಿಪಾಯಿಗಳನ್ನು ಎಲ್ಲಾ ತಾಲೂಕು, ಹೋಬಳಿ ಕಚೇರಿಗಳಲ್ಲಿ, ಹಾಗೂ ಕೋಟೆಗಳ ಮೇಲೆ ರಕ್ಷಣೆಗಾಗಿ ನಿಯೋಜಿಸಲಾಗುತ್ತಿತ್ತು. ಈ ಕಂದಚಾರ್ ರಕ್ಷಣಾ ವ್ಯವಸ್ಥೆ ೧೮೬೧ ರವರೆಗೂ ಜಾರಿಯಲ್ಲಿದ್ದಿತು.

ಪ್ರತೀ ತಾಲೂಕಿನ ಪೋಲಿಸ್ ವ್ಯವಸ್ಥೆಗೆ ಮುಖ್ಯಸ್ಥನಾಗಿದ್ದ ಅಮಲ್ದಾರನ ಸಹಾಯಕ್ಕಾಗಿ ಒಬ್ಬ ಖಿಲ್ಲೇದಾರ, ಒಬ್ಬ ನಾಯಬ್ ಖಿಲ್ಲೇದಾರ್ (ದಫೇದಾರ), ಹಾಗೂ ಹಲವು ಹೋಬಳಿದಾರರಿದ್ದರು. ಇಡೀ ಪೋಲಿಸ್ ಇಲಾಖೆ ಒಬ್ಬ ಕಮೀಷನರ ಆಡಳಿತಕ್ಕೆ ಒಳಪಟ್ಟಿದ್ದು, ಈತನಿಗೆ 'ಭಕ್ಷಿ' ಎಂಬ ಸಹಾಯಕನಿದ್ದನು. ೧೮೪೪ರಲ್ಲಿ ಈ ಹುದ್ದೆಯನ್ನು ರದ್ದುಪಡಿಸಲಾಯಿತು. ಅದೇ ವರ್ಷ ಪೋಲಿಸ್ ಸೂಪರಿಂಟೆಂಡೆಂಟ್ ಹುದ್ದೆಯೊಂದನ್ನು ಸೃಷ್ಟಿಸಿ ಖಿಲ್ಲೇದಾರರಿಗಿಂತ ಕೆಳಗಿನ ಅಧಿಕಾರಿಗಳ ನೇಮಕಾತಿ, ಬಡ್ತಿ, ಶಿಕ್ಷೆ ಹಾಗೂ ಬರ್ತರ್ಫ್ ಮಾಡುವ ಅಧಿಕಾರಗಳನ್ನು ಅವರಿಗೆ ನೀಡಲಾಯಿತು. ೧೮೫೬ರಲ್ಲಿ ಜ್ಯುಡಿಷಿಯಲ್ ಕಮೀಷನರರ ನೇಮಕಾತಿಯಾಯಿತು. ಇವರು ಪದನಿಮಿತ್ತ ರಾಜ್ಯ ಪೋಲಿಸ್ ಮುಖ್ಯಾಧಿಕಾರಿ (ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್) ಸಹ ಆಗಿದ್ದರು. ಜಿಲ್ಲಾ ಮಟ್ಟದಲ್ಲಿ ೧೮೭೩ರಲ್ಲಿ ಸೃಷ್ಟಿಯಾದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಅವರು ಪೋಲಿಸ್ ಮುಖ್ಯಸ್ಥರಾಗಿದ್ದರು. ಇವರ ಸಹಾಯಕ್ಕಾಗಿ ಎಲ್ಲಾ ಜಿಲ್ಲೆಗಳಿಗೆ ೧೮೭೪ರಲ್ಲಿ ಸಹಾಯಕ ಕಮೀಷನರುಗಳನ್ನೂ ನೇಮಿಸಲಾಯಿತು. ೧೮೭೫ರಲ್ಲಿ ಈ ಮೇಲ್ಕಂಡ ಅಧಿಕಾರಿಗಳ ಹುದ್ದೆ, ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಯಿತು. ಆದರೆ ೧೮೭೬–೭೭ ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯನ್ನು ರದ್ದುಪಡಿಸಲಾಯಿತು. ೧೮೭೯ರಲ್ಲಿ ಜ್ಯುಡಿಷಿಯಲ್ ಕಮಿಷನರಿಗೆ ಕೊಡಮಾಡಲ್ಪಟ್ಟಿದ್ದ ಐ.ಜಿ.ಪಿ. ಅಧಿಕಾರವನ್ನು ರದ್ದುಪಡಿಸಿ ಪೋಲಿಸ್ ಇಲಾಖೆಯ ನೇರ ಆಡಳಿತವನ್ನು ಮುಖ್ಯ ಕಮೀಷನರು ವಹಿಸಿಕೊಂಡರು.

### ೧೮೮೧ ರ ನಂತರ

ರಾಜ್ಯವು ೧೮೮೧ ರಲ್ಲಿ ಮೈಸೂರು ಅರಸರಿಗೆ ಮರು ಹಸ್ತಾಂತರಗೊಂಡ ನಂತರ (ರೆಂಡಿಷನ್) ಪೋಲಿಸ್ ಇಲಾಖೆಯು ದಿವಾನರ ಆಡಳಿತಕ್ಕೆ ಒಳಪಟ್ಟಿತ್ತು. ೧೮೮೫ರಲ್ಲಿ ಸರ್ಕಾರವು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್ ಹುದ್ದೆಯನ್ನು ಸೃಷ್ಟಿಸಿ, ಇವರ ಆಡಳಿತಕ್ಕೆ ಅರಣ್ಯ ಮತ್ತು ತೋಟಗಾರಿಕೆ ಇನ್ಸ್‌ಪೆಕ್ಟರ್ ಜನರಲ್ ಹಾಗೂ ಕೃಷಿ ಮತ್ತು ಅಂಕಿ ಅಂಶಗಳ ನಿರ್ದೇಶಕರ ಹುದ್ದೆಗಳನ್ನೂ ಒಳಪಡಿಸಿತು. ಉಪವಿಭಾಗಗಳಿಗೆ ಅಧಿಕಾರಿಗಳಾಗಿ ಪೋಲಿಸ್ ಸಹಾಯಕ ಕಮಿಷನರರನ್ನು ನೇಮಿಸಲಾಯಿತು. ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರರು ತಾಲೂಕು ಮಟ್ಟದ ಪೋಲಿಸ್ ಅಧಿಕಾರಿಗಳಾಗಿ ಮುಂದುವರಿದರು. ಇವರಿಗೆ ಪರಿವೀಕ್ಷಕರು ಹಾಗೂ ಜಮೇದಾರರು ಸಹಾಯಕ ಅಧಿಕಾರಿಗಳಾಗಿದ್ದರು.

ಪೋಲಿಸ್ ಪಡೆಯಲ್ಲಿ ಖಾಯಂ ಪೋಲಿಸರೊಡನೆ ಗ್ರಾಮ ಪೋಲಿಸರೂ ಸೇರಿದ್ದರು. ಗ್ರಾಮಪೋಲಿಸ್ ಪಡೆಯಲ್ಲಿ ಮೊದಲಿದ್ದಂತೆ ಪಟೇಲ, ತಳವಾರ ಹಾಗೂ ತೋಟಿ ಮುಂದುವರಿದರು. ಜಿಲ್ಲಾ ಪೋಲಿಸ್ ದಳದಲ್ಲಿ ತಾಲೂಕು ಪೋಲಿಸರು ಹಾಗೂ ಜಿಲ್ಲಾ ರಿಜರ್ವ್ ಪೋಲಿಸರೂ ಸೇರಿದ್ದರು. ೧೮೯೧ರಲ್ಲಿ ಪೋಲಿಸ್ ಇಲಾಖೆ ಪುನರ್ವಿಂಗಡಿಸಲ್ಪಟ್ಟು, ಖಾಯಂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್ ಹುದ್ದೆ ಸೃಷ್ಟಿಯಾಯಿತು. ಸಹಾಯಕ ಪೋಲಿಸ್ ಕಮಿಷನರುಗಳನ್ನು ಪೋಲಿಸ್ ಸೂಪರಿಂಟೆಂಡೆಂಟರೆಂದು ಪುನರ್ನಾಮಕರಣ ಮಾಡಲಾಯಿತು. ೧೯೦೬ರಲ್ಲಿ ಸೂಪರಿಂಟೆಂಡೆಂಟರ ಹಾಗೂ ಸಹಾಯಕ ಕಮಿಷನರುಗಳ ಹುದ್ದೆಗಳನ್ನು ವಿಲೀನಗೊಳಿಸಿ ಅಸಿಸ್ಟೆಂಟ್ ಕಮೀಷನರ್ ಎಂಬ ಸಾಮಾನ್ಯ ವೃಂದಕ್ಕೆ ಒಳಪಡಿಸಲಾಯಿತು. ೧೯೧೩ರಲ್ಲಿ ಇಲಾಖೆ ಪುನರ್ಪರಿಶೀಲನೆಗೊಳಪಟ್ಟು, ಇನ್ಸ್‌ಪೆಕ್ಟರ್ ಜನರಲ್‌ರ ಸಂಬಳವನ್ನೂ, ಅವರ ಕುದುರೆ ಭತ್ಯೆಯನ್ನೂ ಹೆಚ್ಚಿಸಲಾಯಿತು. ಜಮೇದಾರರ ಬದಲಾಗಿ ಸಬ್ ಇನ್ಸ್‌ಪೆಕ್ಟರ್

ಹುದ್ದೆ ಸೃಷ್ಟಿಯಾಯಿತು. ೧೯೧೮ರಲ್ಲಿ ಪ್ರಕಟಗೊಂಡ 'ದಿ ಮೈಸೂರು ಪೋಲಿಸ್ ಮ್ಯಾನುಯಲ್' ಪುಸ್ತಕವು ಇಲಾಖೆಗೆ ಮಾರ್ಗದರ್ಶಿಯಾಗಿ ಮುಂದಿನ ಬದಲಾವಣೆಗಳಿಗೆ ಬುನಾದಿಯಾಯಿತು.

ಮಂಡ್ಯ ಸ್ವತಂತ್ರ ಜಿಲ್ಲೆಯಾಗುವುದಕ್ಕೆ ಮೊದಲು ಅದರ ಪೋಲಿಸ್ ಆಡಳಿತ ಮೈಸೂರು ಜಿಲ್ಲೆಗೆ ಒಳಪಟ್ಟಿದ್ದು, ಫ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ನಲ್ಲಿ ಕೇಂದ್ರಸ್ಥಾನ ಹೊಂದಿದ್ದ ಪೋಲಿಸ್ ಸೂಪರಿಂಟೆಂಡೆಂಟರು ಮಂಡ್ಯ ಪ್ರಾಂತದ ಮೇಲೆ ಆಡಳಿತಾತ್ಮಕ ಹತೋಟಿ ಹೊಂದಿದ್ದರು. ಮಂಡ್ಯ ಒಂದು ಸ್ವತಂತ್ರ ಜಿಲ್ಲೆಯಾಗಿ ಪರಿವರ್ತನೆಯಾದ ನಂತರ, ಅವರ ಕೇಂದ್ರ ಸ್ಥಾನವನ್ನು ಮಂಡ್ಯಕ್ಕೆ ಸ್ಥಳಾಂತರಿಸಲಾಯಿತು.

**ಪುನರ್ವ್ಯವಸ್ಥೆ**

ಇನ್ಸ್‌ಪೆಕ್ಟರ್ ಜನರಲ್ ಅವರು ೧೯೪೫ರಲ್ಲಿ ಸಲ್ಲಿಸಿದ ಪೋಲಿಸ್ ವ್ಯವಸ್ಥೆಗೆ ಸಂಬಂಧಿಸಿದ ಸೂಚನೆಗಳನ್ನು ಸರ್ಕಾರ ಪರಿಗಣಿಸಿ ಆಡಳಿತಾತ್ಮಕ ಮಾರ್ಪಾಡುಗಳನ್ನು ಜಾರಿಮಾಡಿತು. ಅದರಂತೆ ಮದ್ದೂರು, ಹಾಗೂ ಕೆ.ಆರ್.ಪೇಟೆಗಳಲ್ಲಿನ ಪೋಲಿಸ್ ವೃತ್ತಗಳನ್ನು ರದ್ದುಪಡಿಸಲಾಯಿತು. ಬಸರಾಳು, ಕೊಪ್ಪ, ಕೆ.ಆರ್.ಸಾಗರ ಹಾಗೂ ಕಿಕ್ಕೇರಿಗಳಲ್ಲಿ ಹೊಸ ಪೋಲಿಸ್ ಠಾಣೆಗಳನ್ನು ಪ್ರಾರಂಭಿಸಲಾಯಿತು. ಮಂಡ್ಯ, ಮಳವಳ್ಳಿ, ಶ್ರೀರಂಗಪಟ್ಟಣ ಹಾಗೂ ನಾಗಮಂಗಲಗಳಲ್ಲಿ ಪೋಲಿಸ್ ವೃತ್ತಗಳನ್ನು ಸ್ಥಾಪಿಸಲಾಯಿತು. ಹಾಗೆಯೇ ಮಂಡ್ಯ, ಮಳವಳ್ಳಿ ಹಾಗೂ ನಾಗಮಂಗಲಗಳನ್ನು ಸೇರಿಸಿ ಒಂದು ವಿಭಾಗ ಮಾಡಿ, ಅದರ ಕೇಂದ್ರ ಸ್ಥಾನವನ್ನು ಮಂಡ್ಯದಲ್ಲಿ ನೆಲೆಗೊಳಿಸಿ, ಅದಕ್ಕೆ ಒಬ್ಬ ಡೆಪ್ಯುಟಿ ಸೂಪರಿಂಟೆಂಡೆಂಟರನ್ನು ಮುಖ್ಯಸ್ಥರನ್ನಾಗಿರಿಸಲಾಯಿತು. ಉಳಿದವುಗಳನ್ನು ಶ್ರೀರಂಗಪಟ್ಟಣದ ಉಪವಿಭಾಗದಲ್ಲಿ ಒಬ್ಬ ಸೂಪರಿಂಟೆಂಡೆಂಟರ ನೇರ ಆಡಳಿತಕ್ಕೆ ಒಳಪಡಿಸಲಾಯಿತು. ಈ ಪುನರ್ವಿಂಗಡಣೆಯ ಅವಧಿಯಲ್ಲಿಯೇ ಮೈಸೂರು ಸಶಸ್ತ್ರ ಕಾಯ್ದಿರಿಸಿದ ಪೋಲಿಸ್ ಪಡೆಯನ್ನು ವಿಕೇಂದ್ರೀಕರಿಸಿ, ಜಿಲ್ಲಾ ಸಶಸ್ತ್ರ ಕಾಯ್ದಿರಿಸಿದ ಪಡೆಯಾಗಿ ಪರಿವರ್ತಿಸಿ, ಅದಕ್ಕೆ ಒಬ್ಬ ಪೋಲಿಸ್ ಸೂಪರಿಂಟೆಂಡೆಂಟರನ್ನು ಮುಖ್ಯಸ್ಥರನ್ನಾಗಿ ಮಾಡಲಾಯಿತು, ೧೯೬೧ರ ಜುಲೈ ತಿಂಗಳಲ್ಲಿ ಪಾನನಿಷೇಧ ಕಾಯಿದೆ ಜಾರಿಯಾದಾಗ ಅದರ ಅನುಷ್ಠಾನಕ್ಕಾಗಿ ಒಬ್ಬ ಸಬ್ ಇನ್ಸ್‌ಪೆಕ್ಟರ್, ನಾಲ್ವರು ಮುಖ್ಯ ಪೇದೆಗಳು ಹಾಗೂ ಹದಿನೈದು ಪೇದೆಗಳನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳಲಾಯಿತು. ರಾಜ್ಯ ಪುನರ್ವಿಂಗಡಣಾ ಪೂರ್ವದಲ್ಲಿ ರಾಜ್ಯದಲ್ಲಿ ವಿವಿಧ ಪೋಲಿಸ್ ಕಾಯ್ದೆಗಳು ಜಾರಿಯಲ್ಲಿದ್ದು, ಅವುಗಳಲ್ಲಿ ಏಕರೂಪತೆಯನ್ನು ಸಾಧಿಸುವ ಸಲುವಾಗಿ ಮೈಸೂರು ಪೋಲಿಸ್ ಕಾಯ್ದೆ ೧೯೬೩ ಜಾರಿಯಾಗಿ, ಏಪ್ರಿಲ್ ೨, ೧೯೬೫ರಲ್ಲಿ ರಾಜ್ಯಾದ್ಯಂತ ಅನುಷ್ಠಾನಗೊಂಡಿತು.

ಪ್ರಸ್ತುತ ಜಿಲ್ಲೆಯಲ್ಲಿ ಮಂಡ್ಯ, ಶ್ರೀರಂಗಪಟ್ಟಣ, ಹಾಗೂ ಮಳವಳ್ಳಿ – ಹೀಗೆ ಮೂರು ಪೋಲಿಸ್ ಉಪವಿಭಾಗಗಳಿರುತ್ತವೆ. ಪ್ರತೀ ಉಪವಿಭಾಗಕ್ಕೆ ಒಬ್ಬ ಡಿ.ವೈ.ಎಸ್.ಪಿ. (ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್) ಮುಖ್ಯಸ್ಥರಾಗಿರುತ್ತಾರೆ. ಮಂಡ್ಯ ಉಪವಿಭಾಗದ ಅಧೀನದಲ್ಲಿ ಮಂಡ್ಯ ನಗರ ವೃತ್ತ, ಮಂಡ್ಯ ಗ್ರಾಮಾಂತರ ವೃತ್ತ, ಹಾಗೂ ನಾಗಮಂಗಲ ವೃತ್ತಗಳು ಒಂದೊಂದು ವೃತ್ತ ನಿರೀಕ್ಷಕರಡಿ ಕಾರ್ಯನಿರ್ವಹಿಸುತ್ತಿವೆ. ನಗರವೃತ್ತದಡಿ ಮಂಡ್ಯ ಪೂರ್ವ, ಪಶ್ಚಿಮ ಹಾಗೂ ಸಂಚಾರೀ ಠಾಣೆಗಳು: ಗ್ರಾಮಾಂತರ ವೃತ್ತದಡಿ ಮಂಡ್ಯ ಗ್ರಾಮಾಂತರ, ಕೆರಗೋಡು, ಶಿವಳ್ಳಿ, ಹಾಗೂ ಬಸರಾಳು ಠಾಣೆಗಳು: ನಾಗಮಂಗಲ ವೃತ್ತದಡಿ ನಾಗಮಂಗಲ, ಬೆಳ್ಳೂರು, ಹಾಗೂ ಬಿಂಡಿಗನವಿಲೆ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಶ್ರೀರಂಗಪಟ್ಟಣ ಉಪವಿಭಾಗದ ಅಧೀನದಲ್ಲಿ ಇಬ್ಬರು ವೃತ್ತ ನಿರೀಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀರಂಗಪಟ್ಟಣ ವೃತ್ತದಡಿ ಶ್ರೀರಂಗಪಟ್ಟಣ, ಕೃಷ್ಣರಾಜಸಾಗರ, ಅರಕೆರೆ ಹಾಗೂ ಪಾಂಡವಪುರ ಮೇಲ್ದರ್ಜೆಯ ಠಾಣೆಗಳ ಕಾರ್ಯನಿರ್ವಹಿಸಿದರೆ, ಕೃಷ್ಣರಾಜಪೇಟೆ ವೃತ್ತದಡಿ ಕೃಷ್ಣರಾಜಪೇಟೆ ಪಟ್ಟಣ, ಕೃಷ್ಣರಾಜಪೇಟೆ ಗ್ರಾಮಾಂತರ ಹಾಗೂ ಕಿಕ್ಕೇರಿ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಮಳವಳ್ಳಿ ಉಪವಿಭಾಗದಲ್ಲಿ

ಮಳವಳ್ಳಿ, ಕೆ.ಎಂ.ದೊಡ್ಡಿ ಹಾಗೂ ಮದ್ದೂರು ವೃತ್ತಗಳು ಕಾರ್ಯನಿರ್ವಹಿಸುತ್ತಿವೆ. ಮಳವಳ್ಳಿ ವೃತ್ತದಡಿ ಮಳವಳ್ಳಿ ಪಟ್ಟಣ, ಮಳವಳ್ಳಿ ಗ್ರಾಮಾಂತರ, ಕಿರುಗಾವಲು, ಬೆಳಕವಾಡಿ (ಶಿವಸಮುದ್ರ ಸೇರಿ) ಠಾಣೆಗಳು: ಕೆ.ಎಂ.ದೊಡ್ಡಿ ವೃತ್ತದಡಿ ಕೆ.ಎಂ.ದೊಡ್ಡಿ, ಹಲಗೂರು ಹಾಗೂ ತೊರೆಕಾಡನಹಳ್ಳಿ ಠಾಣೆಗಳು ಹಾಗೂ ಮದ್ದೂರು ವೃತ್ತದಡಿ ಮದ್ದೂರು, ಬೆಸಗರಹಳ್ಳಿ, ಕೊಪ್ಪ ಮತ್ತು ಕೆಸ್ತೂರು ಠಾಣೆಗಳು ಕಾರ್ಯನಿರ್ವಹಿಸುತ್ತಿವೆ.

ಮಂಡ್ಯ ಜಿಲ್ಲೆಯು ಸಾಮಾನ್ಯವಾಗಿ ಶಾಂತಿಯುತವಾದ ಮನೋಭಾವವನ್ನು ಹೊಂದಿರುವ ಜನಗಳ ಜಿಲ್ಲೆಯಾದುದರಿಂದ ವಿಶೇಷವಾಗಿ ಆಡಳಿತ ವ್ಯವಸ್ಥೆಗೆ ಧಕ್ಕೆ ತರುವ ದೀರ್ಘಕಾಲಿಕ ಗಲಭೆಗಳು ದಾಖಲಾಗಿಲ್ಲ. ಆದರೂ ವೈವಿಧ್ಯಮಯ ಪ್ರಕೃತಿಯ ಜನತೆಯಲ್ಲಿ ಸ್ವಾಭಾವಿಕವಾಗಿ ಉಂಟಾಗುವ ದೈನಂದಿನ ವೈಮನಸ್ಯಗಳಿಂದ ಉಂಟಾಗುವ, ಗೃಹಕಲಹಗಳಿಂದ ಮೊದಲುಗೊಂಡು, ಸಾಮಾಜಿಕ ಶಾಂತಿಭಂಗ ಮಾಡುವ ಸಮಸ್ಯೆಗಳನ್ನು ಜಿಲ್ಲಾ ಪೋಲಿಸ್ ಇಲಾಖೆ ಸಮರ್ಥವಾಗಿ ಬಗೆಹರಿಸಿಕೊಂಡು ಬಂದಿದೆ. ವಿದ್ಯಾರ್ಥಿ ಸಮುದಾಯದ ಮತ್ತು ರೈತರ ಚಳವಳಿಗಳು ಆಗಿಂದಾಗ್ಗೆ ಉದ್ಭವಿಸುವ ಸಮಸ್ಯೆಗಳಾದುದರಿಂದ, ಅವನ್ನು ಹತ್ತಿಕ್ಕಲೂ ಸಹ ಇಲಾಖೆ ಸರ್ವಕಾಲದಲ್ಲಿಯೂ ತಯಾರಾಗಿರುವುದರಿಂದ, ಜಿಲ್ಲೆಯ ಜನ ಶಾಂತಿಯುತ ಜೀವನ ನಡೆಸುತ್ತಿದ್ದಾರೆ. ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಕದಡುವ ದೀರ್ಘಕಾಲಿಕ ಕಾರ್ಮಿಕ ಗಲಭೆಗಳು ಉಂಟಾಗಿಲ್ಲವಾದರೂ, ದಾಖಲಾದ ಹಲವು ಘಟನೆಗಳನ್ನು ಈ ಮುಂದೆ ವಿವರಿಸಲಾಗಿದೆ.

ಐತಿಹಾಸಿಕ ಪ್ರಾಮುಖ್ಯಯುಳ್ಳ ಇರ್ವಿನ್ ನಾಲಾ ಚಳವಳಿ (೧೯೩೨) ಹಾಗೂ ವರುಣ ನಾಲಾ ವಿರೋಧಿ ಚಳವಳಿ (೧೯೭೦),ಗಳ ನಂತರ ಮಂಡ್ಯ ಸಕ್ಕರೆ ಕಾರ್ಖಾನೆ ಕಾರ್ಮಿಕರು ೧೯೮೮ರ ಡಿಸೆಂಬರ್‌ನಲ್ಲಿ ತಮ್ಮ ಬೇಡಿಕೆ ಈಡೇರಿಕೆಗಾಗಿ ಉಪವಾಸ ಸತ್ಯಾಗ್ರಹ ನಡೆಸಿದರು. ಏಪ್ರಿಲ್ ೧೯೯೧ ರಲ್ಲಿ ಕೆ.ಎಂ. ದೊಡ್ಡಿಯ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಕಾರ್ಮಿಕರು ತಮ್ಮ ಕಾರ್ಮಿಕ ಸಂಘದ ಕಾರ್ಯದರ್ಶಿಯನ್ನು ಅಮಾನತ್ತಿನಿಂದ ಬಿಡುಗಡೆಮಾಡಲು ಒತ್ತಾಯಿಸಿ ಉಪವಾಸ ಸತ್ಯಾಗ್ರಹ ನಡೆಸಿದರು. ಈ ಎರಡೂ ಘಟನೆಗಳು ಶಾಂತಿಯುತವಾಗಿದ್ದವು. ೧೯೯೮ನೇ ಜೂನ್‌ನಲ್ಲಿ ಮಂಡ್ಯ ಅಸಿಟೇಟ್ ಕಾರ್ಖಾನೆ ಮುಚ್ಚಿದುದರ ವಿರುದ್ಧ ಸುಮಾರು ೨೦೦ ಮಂದಿ ಕಾರ್ಮಿಕರು ಧರಣಿ ನಡೆಸಿ, ಶಾಂತಿಯುತ ಮೆರವಣಿಗೆಯಲ್ಲಿ ತೆರಳಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ಇದೇ ಕಾರ್ಖಾನೆಯ ೫೦೦ ಮಂದಿ ಕಾರ್ಮಿಕರು ೧೯೯೮ರ ಅಕ್ಟೋಬರ್ ತಿಂಗಳಲ್ಲಿ ಕಾರ್ಖಾನೆ ಮುಚ್ಚಿದುದರ ವಿರುದ್ಧ ಧರಣಿ, ಉಪವಾಸ, ಮಾನವ ಸರಪಳಿ, ಜೈಲ್ ಭರೋ ಚಳವಳಿ ನಡೆಸಿದ್ದು, ಈ ಬಗ್ಗೆ ದೊಂಬಿ ಪ್ರಕರಣ ದಾಖಾಲಾಗಿರುತ್ತದೆ.

ಹಲವಾರು ಪ್ರಮುಖ ವಿದ್ಯಾ ಸಂಸ್ಥೆಗಳನ್ನೊಳಗೊಂಡಿರುವ ಜಿಲ್ಲಾ ಕೇಂದ್ರ ಮಂಡ್ಯದಲ್ಲಿ ವಿದ್ಯಾರ್ಥಿಗಳ ಚಳವಳಿಗಳೂ ಹಲವಾರು ನಡೆದಿದ್ದು, ತೀವ್ರ ಹಿಂಸಾಚಾರದ ಘಟನೆಗಳೇನೂ ಉಂಟಾಗಿಲ್ಲ. ೧೯೮೮ರಲ್ಲಿ ತಮ್ಮ ಬೇಡಿಕೆ ಈಡೇರಿಕೆಗಾಗಿ ಮಂಡ್ಯ ಕಾಲೇಜಿನ ವಿದ್ಯಾರ್ಥಿಗಳು ಚಳವಳಿ ನಡೆಸಿ, ಹಿಂಸಾಚಾರಕ್ಕಿಳಿದಾಗ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದ್ದೇ ಅಲ್ಲದೇ, ಲಘು ಲಾಠಿ ಪ್ರಹಾರ ಮಾಡಿದಾಗ ಒಬ್ಬ ವಿದ್ಯಾರ್ಥಿ ಹಾಗೂ ೧೧ ಮಂದಿ ಪೋಲಿಸರಿಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ೧೯೯೦ರಲ್ಲಿ ಮಂಡಲ್ ಹಾಗೂ ಚಿನ್ನಪ್ಪ ರೆಡ್ಡಿ ಆಯೋಗಗಳ ವರದಿ ವಿರುದ್ಧ ವಿದ್ಯಾರ್ಥಿಗಳು ನಡೆಸಿದ ಚಳವಳಿಯಲ್ಲಿ ಯಾವುದೇ ಹಿಂಸಾಚಾರ ನಡೆಯಲಿಲ್ಲ. ೧೯೯೩ರ ಫೆಬ್ರವರಿಯಲ್ಲಿ ಕೆ.ಎಂ.ದೊಡ್ಡಿಯ ಭಾರತೀ ಕಾಲೇಜಿಗೆ ಸೇರಿದ ಸುಮಾರು ೨೫೦೦ ವಿದ್ಯಾರ್ಥಿಗಳು ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಿಂದ ವಾತಾವರಣ ಕಲುಷಿತಗೊಳ್ಳುತ್ತಿರುವ ಬಗ್ಗೆ ನಡೆಸಿದ ಮೆರವಣಿಗೆ ಹಿಂಸಾಚಾರಕ್ಕೆ ತಿರುಗಿ, ಕಾರ್ಖಾನೆಗೆ ಹಾಗೂ ಜನಸಾಮಾನ್ಯರ ವಾಹನಗಳಿಗೆ ಜಖಂ ಆದಾಗ, ದೊಂಬಿ ಪ್ರಕರಣ ದಾಖಲಾಗಿದೆ. ಇದೇ ಕಾಲೇಜಿನ ಹಾಗೂ ಮಂಡ್ಯದ ಇತರೆ ಕಾಲೇಜುಗಳ ಸುಮಾರು ೫೦೦೦ ವಿದ್ಯಾರ್ಥಿಗಳು ೧೯೯೪ರ ಆಗಸ್ಟ್‌ನಲ್ಲಿ ಸ್ನಾತಕೋತ್ತರ ಪದವಿ ಸೇರಲು ಪ್ರವೇಶ ಪರೀಕ್ಷೆ ಮಾಡಬಾರದೆಂದು ಮೈಸೂರಿನಲ್ಲಿ ಕುಲಪತಿಯವರಿಗೆ ಮನವಿ ನೀಡಲು ಹೋದಾಗ

ಉಂಟಾದ ಗಲಭೆಯಲ್ಲಿ, ಹಲವರಿಗೆ ಸಣ್ಣಪುಟ್ಟ ಗಾಯಗಳಾಯಿತು. ಈ ಘಟನೆಯ ವಿರುದ್ಧ ಮರುದಿನ ಕೆ.ಎಂ.ದೊಡ್ಡಿಯಲ್ಲಿ ಸುಮಾರು ೩೦೦೦ ವಿದ್ಯಾರ್ಥಿಗಳು ಕುಲಪತಿಯವರ ಪ್ರತಿಕೃತಿ ದಹನ ಮಾಡಿ, ಬಸ್ಸುಗಳಿಗೆ ಬೆಂಕಿಹಚ್ಚಿದಾಗ, ಪೋಲಿಸರು ಲಾಠಿ ಪ್ರಹಾರ ಮಾಡಿ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿ, ದೊಂಬಿ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ. ೧೯೭೮ರ ಜೂನ್ ತಿಂಗಳಿನಲ್ಲಿ ಮಂಡ್ಯದ ಪಿಇಎಸ್ ಇಂಜನೀಯರಿಂಗ್ ಕಾಲೇಜಿನ ಸುಮಾರು ೩೦೦ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಸ್ತಾ ರೋಖೋ ಚಳವಳಿ ನಡೆಸಿ ಹಲವಾರು ವಾಹನಗಳಿಗೆ ಜಖಂ ಮಾಡಿದ್ದು, ಈ ಬಗ್ಗೆ ದೊಂಬಿ ಪ್ರಕರಣ ದಾಖಲಾಯಿತು.

**ಕಾವೇರಿ ಚಳವಳಿ:–** ಬಹಳ ಹಿಂದಿನ ಅಂತರರಾಜ್ಯ ಸಮಸ್ಯೆಯಾದ ಕಾವೇರಿ ನೀರಿನ ಸಮಸ್ಯೆ ೨೦೦೨ರ ಸೆಪ್ಟೆಂಬರ್ ತಿಂಗಳಿನಲ್ಲಿ ಪುನರಾವರ್ತನೆಯಾಯಿತು. ಆ ತಿಂಗಳ ಎಂಟನೇ ತಾರೀಕಿನಂದು ತಮಿಳುನಾಡಿಗೆ ಪ್ರತೀದಿನ ೧.೨೫ ಟಿಎಂಸಿ ಕಾವೇರಿ ನೀರು ಹರಿಸಬೇಕೆಂಬ ಸರ್ವೋಚ್ಚ ನ್ಯಾಯಾಲಯದ ಆದೇಶಪಾಲನೆಯಾದಾಗ, ಮಂಡ್ಯ ಜಿಲ್ಲೆಯಾದ್ಯಂತ ರೈತರ ಚಳವಳಿ ಪ್ರಾರಂಭವಾಯಿತು. ಜಿಲ್ಲೆಯ ಎಲ್ಲೆಡೆ ರೈತರು ಮೇಲ್ಕಂಡ ಆದೇಶದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಹಿಂಸಾಚಾರಕ್ಕಿಳಿದರು. ಶಾಂತಿ, ಸುವ್ಯವಸ್ಥೆ ಕಾಪಾಡಲು ಪೋಲಿಸರು ಅಶ್ರುವಾಯು ಸಿಡಿಸಿ, ಲಾಠಿ ಪ್ರಹಾರ ಮಾಡಿ, ಕರ್ಫ್ಯೂ ಜಾರಿಮಾಡಿದರು. ಇದೇ ಸಮಸ್ಯೆಗೆ ಸಂಬಂಧಿಸಿದಂತೆ ಕಬಿನಿ ಜಲಾಶಯದಲ್ಲಿ ಧುಮುಕಿ ರೈತನೊಬ್ಬ ಆತ್ಮಾರ್ಪಣೆಮಾಡಿಕೊಂಡಾಗ, ಹಿಂಸಾಚಾರ ಹೆಚ್ಚಿತು. ನಾಲ್ಕು ಅರೆ ಮಿಲಿಟರಿ ತುಕಡಿಗಳನ್ನು ಜಿಲ್ಲೆಗೆ ಕರೆಸುವ ಮೂಲಕ ಪೋಲಿಸರು ಎರಡು ತಿಂಗಳ ಕಾಲ ಮುಂದುವರಿದ ಈ ಚಳವಳಿಯನ್ನು ಹತೋಟಿಗೆ ತಂದರು. ಈ ಸಂಬಂಧ ಹಲವಾರು ರೈತ ಮುಖಂಡರನ್ನು ಬಂಧಿಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದ್ದು, ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

**ಕೋಷ್ಟಕ ೧೦.೨೧ ಈ ಮುಂದೆ ೧೯೯೦ ರಿಂದ ೨೦೦೨ ವರೆಗೆ ಜಿಲ್ಲೆಯಲ್ಲಿ ನಡೆದ ವಿವಿಧ ಅಪರಾಧಗಳ ವಿವರ ನೀಡಲಾಗಿದೆ.**

| ವರ್ಷಗಳು | ಕೊಲೆ | ಕಳ್ಳತನ | ಸುಲಿಗೆ | ದರೋಡೆ | ಅತ್ಯಾಚಾರ |
|---|---|---|---|---|---|
| ೧೯೯೦ | ೨೮ | ೫೨೨ | ೦೯ | ೦೮ | ೦೯ |
| ೧೯೯೧ | ೩೧ | ೪೪೩ | ೧೫ | ೧೩ | ೦೮ |
| ೧೯೯೨ | ೫೨ | ೫೭೧ | ೧೧ | ೧೧ | ೦೭ |
| ೧೯೯೩ | ೫೨ | ೭೧೮ | ೦೯ | ೦೪ | ೦೭ |
| ೧೯೯೪ | ೫೪ | ೮೧೧ | ೦೪ | ೧೩ | ೦೭ |
| ೧೯೯೫ | ೫೭ | ೭೫೩ | ೧೦ | ೦೫ | ೧೨ |
| ೧೯೯೬ | ೫೩ | ೬೩೭ | ೧೫ | ೧೯ | ೦೫ |
| ೧೯೯೭ | ೫೭ | ೭೦೫ | ೧೧ | ೧೦ | ೦೮ |
| ೧೯೯೮ | ೫೨ | ೯೧೪ | ೧೨ | ೦೭ | ೦೪ |
| ೧೯೯೯ | ೪೬ | ೬೦೫ | ೨೦ | ೧೪ | ೧೧ |
| ೨೦೦೦ | ೫೪ | ೪೪೧ | ೧೦ | ೧೦ | ೧೦ |
| ೨೦೦೧ | ೫೨ | ೫೩೩ | ೧೭ | ೦೪ | ೧೦ |
| ೨೦೦೨ | ೬೭ | ೫೩೩ | ೨೮ | ೦೨ | ೧೫ |

| ವರ್ಷಗಳು | ಇತರೆ ಅಪರಾಧಗಳು | ಕೌಟುಂಬಿಕ ಕಲಹ | ಲೈಂಗಿಕ ಕಲಹ | ಆಸ್ತಿ ಕಲಹ | ಇತರೆ |
|---|---|---|---|---|---|
| ೧೯೯೦ | ೧೧೮೦ | ೦೧ | ೦೧ | ೦೨ | ೨೪ |
| ೧೯೯೧ | ೧೨೨೧ | ೦೧ | – | ೦೩ | ೨೭ |
| ೧೯೯೨ | ೧೦೬೭ | ೦೨ | ೦೨ | ೦೨ | ೪೬ |
| ೧೯೯೩ | ೧೫೪೬ | ೦೨ | ೦೨ | ೦೩ | ೪೫ |
| ೧೯೯೪ | ೧೬೦೩ | ೦೪ | – | – | ೫೦ |
| ೧೯೯೫ | ೧೬೨೪ | ೦೩ | ೦೪ | ೦೧ | ೪೯ |
| ೧೯೯೬ | ೨೭೬೭ | ೦೧ | – | ೦೧ | ೫೧ |
| ೧೯೯೭ | ೨೬೩೦ | ೦೫ | – | ೦೩ | ೪೯ |
| ೧೯೯೮ | ೧೭೯೮ | ೦೪ | ೦೨ | ೦೪ | ೪೨ |
| ೧೯೯೯ | ೧೭೧೮ | ೦೧ | ೦೨ | ೦೪ | ೩೯ |
| ೨೦೦೦ | ೧೫೯೯ | ೦೪ | ೦೧ | ೦೧ | ೪೮ |

## ಆಕಸ್ಮಿಕ ಸಾವುಗಳ ವಿವರ

| ವರ್ಷಗಳು | ಅತ್ಮಹತ್ಯೆ | ನೀರಿನಲ್ಲಿ ಮುಳುಗುವುದರಿಂದ | ಹಾವು ಕಡಿತದಿಂದ | ವಿದ್ಯುತ್ ಶಾಕ್ ನಿಂದ | ಸಿಡಿಲಿನಿಂದ |
|---|---|---|---|---|---|
| ೧೯೯೦ | ೧೨೦ | ೫೭ | ೦೬ | ೦೮ | – |
| ೧೯೯೧ | ೧೧೮ | ೪೬ | ೦೪ | ೦೭ | ೦೧ |
| ೧೯೯೨ | ೧೨೫ | ೫೯ | – | ೦೩ | – |
| ೧೯೯೩ | ೧೫೦ | ೫೭ | ೦೮ | ೦೨ | – |
| ೧೯೯೪ | ೧೩೭ | ೬೨ | ೦೪ | ೦೬ | – |
| ೧೯೯೫ | ೧೨೪ | ೫೯ | ೧೦ | ೦೪ | ೦೧ |
| ೧೯೯೬ | ೧೨೫ | ೬೫ | ೦೪ | ೦೪ | – |
| ೧೯೯೭ | ೧೩೩ | ೯೩ | ೦೪ | ೦೩ | – |
| ೧೯೯೮ | ೧೭೨ | ೬೮ | ೦೨ | ೦೪ | – |
| ೧೯೯೯ | ೧೯೧ | ೮೪ | ೦೯ | ೧೧ | ೦೩ |
| ೨೦೦೦ | ೧೫೨ | ೭೫ | ೦೫ | ೦೫ | ೦೨ |
| ೨೦೦೧ | ೪೧೩ | ೧೦೨ | ೦೮ | ೦೬ | – |
| ೨೦೦೨ | ೫೮೮ | ೪೬ | ೧೮ | ೧೨ | – |

| ವರ್ಷಗಳು | ವಾಹನಾಪಘಾತದಿಂದ | ಎತ್ತರದಿಂದ ಬೀಳುವುದರಿಂದ | ಸುಟ್ಟ ಗಾಯಗಳಿಂದ | ಇತರೆ ಕಾರಣಗಳಿಂದ | ದಂಡ ವಿಧಿಸಲ್ಪಟ್ಟ ಪ್ರಕರಣಗಳು |
|---|---|---|---|---|---|
| ೧೯೯೦ | ೬೨ | ೧೧ | ೨೪ | ೧೬೭ | ೬೬೧ |
| ೧೯೯೧ | ೮೬ | ೦೫ | ೪೪ | ೧೭೪ | ೭೫೬ |
| ೧೯೯೨ | ೫೬ | ೦೪ | ೩೧ | ೧೭೬ | ೩೬೮ |
| ೧೯೯೩ | ೮೬ | ೦೪ | ೩೩ | ೨೦೮ | ೮೮೦ |
| ೧೯೯೪ | ೮೩ | ೧೨ | ೩೧ | ೧೯೫ | ೯೧೮ |
| ೧೯೯೫ | ೯೩ | ೦೬ | ೩೩ | ೧೯೦ | ೧೦೦೧ |
| ೧೯೯೬ | ೧೧೯ | ೦೪ | ೩೫ | ೧೮೬ | ೧೧೧೧ |
| ೧೯೯೭ | ೧೨೦ | ೦೪ | ೩೮ | ೧೯೬ | ೧೧೧೫ |
| ೧೯೯೮ | ೧೩೨ | ೦೧ | ೫೦ | ೨೪೩ | ೧೧೨೩ |
| ೧೯೯೯ | ೧೦೭ | ೦೫ | ೩೩ | ೨೦೦ | ೯೩೦೦ |
| ೨೦೦೦ | ೧೦೩ | ೦೪ | ೪೫ | ೨೬೮ | ೮೬೮೬ |
| ೨೦೦೧ | ೧೮೨ | – | ೬೨ | ೯೯ | ೧೫೪೭೯ |
| ೨೦೦೨ | ೧೮೮ | – | ೫೮ | ೧೬೬ | ೧೦೦೬೬ |

| ವರ್ಷಗಳು | ಜೈಲಿಗೆ ಕಳುಹಿಸಲ್ಪಟ್ಟ ಪ್ರಕರಣಗಳು | ಅನೈತಿಕ ಚಟುವಟಿಕೆ ಪ್ರಕರಣಗಳು | ಶ್ರೀಗಂಧ ಕಳ್ಳಸಾಗಾಣಿಕೆ ಪ್ರಕರಣಗಳು |
|---|---|---|---|
| ೧೯೯೦ | ೨೮೩ | ೮೪ | ೦೬ |
| ೧೯೯೧ | ೨೨೬ | ೨೬ | ೧೮ |
| ೧೯೯೨ | ೨೧೫ | ೩೫ | ೧೮ |
| ೧೯೯೩ | ೨೪೬ | ೪೫ | ೧೪ |
| ೧೯೯೪ | ೨೨೬ | ೨೮ | ೦೨ |
| ೧೯೯೫ | ೨೬೮ | ೨೮ | ೧೩ |
| ೧೯೯೬ | ೨೪೭ | ೩೧ | ೦೬ |
| ೧೯೯೭ | ೩೧೮ | ೭೨ | ೨೦ |
| ೧೯೯೮ | ೨೩೦ | ೪೧ | ೧೦ |
| ೧೯೯೯ | ೨೪೦ | ೭೫ | ೦೫ |
| ೨೦೦೦ | ೨೫೩ | ೪೦ | ೦೫ |
| ೨೦೦೧ | ೩೦೮ | ೭೧ | ೧೧ |
| ೨೦೦೨ | ೩೧೫ | ೪೨ | ೧೫ |

## ಬಂದೀಖಾನೆಗಳು:

ಮಂಡ್ಯದಲ್ಲಿ ಸ್ವತಂತ್ರ ಜಿಲ್ಲಾ ಬಂದೀಖಾನೆಯು ೧೯೩೯ ರಲ್ಲಿ ಪ್ರಾರಂಭವಾಯಿತು. ಅದಕ್ಕೂ ಮೊದಲು ಖೈದಿಗಳನ್ನು ಮೈಸೂರಿನ ಬಂದೀಖಾನೆಯಲ್ಲಿ ಇಡಲಾಗುತ್ತಿತ್ತು. ಇದೇ ವೇಳೆಯಲ್ಲಿ ಶ್ರೀರಂಗಪಟ್ಟಣದಲ್ಲೂ ಒಂದು ತಾಲೂಕು ಬಂದೀಖಾನೆ ಇದ್ದಿತು. ಇವು ಕ್ರಮವಾಗಿ ಜಿಲ್ಲಾ ಹಾಗೂ ತಾಲೂಕು ಬಂದೀಖಾನೆಯ ಅಧಿಕಾರಿಗಳ ಆಡಳಿತ ವ್ಯಾಪ್ತಿಗೊಳಪಟ್ಟಿದ್ದವು. ಜಿಲ್ಲಾ ಬಂದೀಖಾನೆಯ ಆಧಿಕಾರಿಯು ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲರ ನೇರ ಆಧೀನದಲ್ಲಿದ್ದರೆ, ತಾಲೂಕು ಅಧಿಕಾರಿಯು ಜಿಲ್ಲಾಧಿಕಾರಿಯ ಅಧೀನಕ್ಕೆ ಒಳಪಟ್ಟಿದ್ದರು. ಬಂದೀಖಾನೆಗಳ ಆಡಳಿತವು 'ಮೈಸೂರು ಲಾಕಪ್ ಹಾಗೂ ಜೈಲ್ ಮ್ಯಾನ್ಯುಯಲ್' ನಲ್ಲಿ ಸೂಚಿತವಾದ ನಿಯಮಗಳಂತೆ ನಡೆಯುತ್ತಿದ್ದಿತು.

ಜಿಲ್ಲಾ ಬಂದೀಖಾನೆಯಲ್ಲಿ ೩೮ ಖೈದಿಗಳಿಗೆ ಸ್ಥಳಾವಕಾಶವಿದ್ದು, ಅವರನ್ನು ಏಳು ಕೋಶ (ಸೆಲ್)ಗಳಲ್ಲಿ ಬಂಧಿಸಿಡಲಾಗುತ್ತಿತ್ತು. ಅವುಗಳಲ್ಲಿ ಒಂದು ಕೋಶವು ಮಹಿಳಾ ಖೈದಿಗಳಿಗೆ ಮೀಸಲಾಗಿದ್ದಿತು. ಶ್ರೀರಂಗಪಟ್ಟಣದ ಬಂದೀಖಾನೆಯಲ್ಲಿ ೧೫ ಮಂದಿ ಖೈದಿಗಳಿಗೆ ಸ್ಥಳಾವಕಾಶವಿದ್ದಿತು. ೧೯೬೪ ರಲ್ಲಿ ಜಿಲ್ಲಾ ಬಂದೀಖಾನೆಯಲ್ಲಿ ೨೯ ಮಂದಿ 'ಸಿ' ದರ್ಜೆಯ ಖೈದಿಗಳಿದ್ದರು.

ಮೇಲ್ಕಂಡ ಬಂದೀಖಾನೆಗಳಲ್ಲಿ ಕಡಿಮೆ ಅವಧಿಯ ಖೈದಿಗಳನ್ನು ಮಾತ್ರ ಬಂಧಿಸಲಾಗುತ್ತಿದ್ದು, ಹೆಚ್ಚಿನ ಅವಧಿಯ ಖೈದಿಗಳನ್ನು ಮೈಸೂರು ಅಥವಾ ಬೆಂಗಳೂರು ಬಂದೀಖಾನೆಗಳಿಗೆ ಕಳುಹಿಸಲಾಗುತ್ತಿತ್ತು.

**ಸವಲತ್ತುಗಳು:** ಬಂದೀಖಾನೆಯು ಖೈದಿಗಳಿಗೆ ದಿನಕ್ಕೆರಡು ಬಾರಿ ಶಾಖಾಹಾರಿ ಊಟ ನೀಡಲಾಗುತ್ತದೆ. ಮಾಂಸಹಾರಿಗಳಿಗೆ ವಾರಕ್ಕೊಮ್ಮೆ ಮಾಂಸಾಹಾರ ನೀಡಲಾಗುತ್ತದೆ. ಪುರುಷ ಖೈದಿಗಳಿಗೆ ನಿಕ್ಕರು, ಜುಬ್ಬ ಹಾಗೂ ಮಹಿಳಾ ಖೈದಿಗಳಿಗೆ ಸೀರೆ, ಕುಪ್ಪಸಗಳನ್ನು ನೀಡಲಾಗುತ್ತದೆ. ಒಳಾಂಗಣ ಆಟೋಟಗಳನ್ನಾಡಲು, ತಮ್ಮ ಬಂಧುಗಳೊಡನೆ ಮಾತನಾಡಲು, ದಿನಪತ್ರಿಕೆಗಳನ್ನು ಓದಲು, ತಂತಮ್ಮ ಧರ್ಮಾನುಸಾರ ಪ್ರಾರ್ಥನೆ ಮಾಡಲು ಇವರಿಗೆ ಅವಕಾಶವಿರುತ್ತದೆ. ಇವರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಂದು ನಿರ್ದೇಶಕ ಮಂಡಳಿಯೂ ಕಾರ್ಯನಿರ್ವಹಿಸುತ್ತದೆ. ಇತ್ತೀಚಿಗೆ ಎಲ್ಲಾ ಬಂದೀಖಾನೆಗಳಲ್ಲೂ ವಯಸ್ಕರ ಶಿಕ್ಷಣ, ಗ್ರಂಥಾಲಯಗಳೇ ಮುಂತಾದ ಕಾರ್ಯಕ್ರಮಗಳ ಮೂಲಕ, ಖೈದಿಗಳು ಬಿಡುಗಡೆಯ ನಂತರ ಉತ್ತಮ ಪ್ರಜೆಗಳಾಗಿ ಮಾರ್ಪಡಲು ಅನುಕೂಲಗಳನ್ನು ಕಲ್ಪಿಸಲಾಗಿದೆ.

ಜಿಲ್ಲೆಯ ಉಪ ಬಂದೀಖಾನೆ ೧೯೪೫ರಲ್ಲಿ ಸ್ಥಾಪನೆಗೊಂಡಿದ್ದು, ಇಲ್ಲಿ ಅಧಿಕೃತವಾಗಿ ೭೨ ಮಂದಿ ಖೈದಿಗಳಿಗೆ (೬೪ ಪುರುಷರು, ಎಂಟು ಮಹಿಳೆಯರು) ಸ್ಥಳಾವಕಾಶವಿದೆ. ಸಂಬಂಧಿಕರು, ಸ್ನೇಹಿತರು ಹಾಗೂ ವಕೀಲರೊಡನೆ ಮಾತುಕತೆಗೆ ಅವಕಾಶ, ಆರೋಗ್ಯ ತಪಾಸಣೆ, ಆಟೋಟಗಳ ಸೌಲಭ್ಯ, ಹಬ್ಬ ಹರಿದಿನಗಳಂದು ವಿಶೇಷ ಭೋಜನ ವ್ಯವಸ್ಥೆ, ರಕ್ತ ಸಂಬಂಧಿಕರು ಮೃತರಾದರೆ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವ ಸೌಲಭ್ಯ, ಕಪ್ಪು–ಬಿಳುಪಿನ ದೂರದರ್ಶನ ವ್ಯವಸ್ಥೆ, ವೃತ್ತ ಪತ್ರಿಕೆ ಹಾಗೂ ವಾರಪತ್ರಿಕೆಗಳನ್ನು ಓದುವ ವ್ಯವಸ್ಥೆ, ಮುಂತಾದ ಸೌಲಭ್ಯಗಳನ್ನು ಸರ್ಕಾರವು ಖೈದಿಗಳಿಗೆ ನೀಡಿದೆ. ಅಲ್ಲದೆ ಕಾರಾಗೃಹದಲ್ಲಿಯೇ ಇರುವ ಶಾಲೆಯಲ್ಲಿ ಅವಿದ್ಯಾವಂತರ ಸಲುವಾಗಿ, ಶಿಕ್ಷಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ನೇಮಕಗೊಂಡಿರುವ ಶಿಕ್ಷಕರು ಬಂದು ಬೋಧನೆ ಮಾಡುತ್ತಾರೆ. ಪ್ರತೀ ವರ್ಷ ಸುಮಾರು ೧೨೦ ಮಂದಿ ಈ ಶೈಕ್ಷಣಿಕ ಸೌಲಭ್ಯ ಪಡೆಯುತ್ತಾರೆ. ಇದು ಉಪ ಕಾರಾಗೃಹವಾದುದರಿಂದಲೂ ಮೂರು ತಿಂಗಳಿಗಿಂತ ಹೆಚ್ಚಿನ ದೀರ್ಘಕಾಲಿಕ ಖೈದಿಗಳನ್ನು ಮೈಸೂರು ಆಥವಾ ಬೆಂಗಳೂರಿನ ಕೇಂದ್ರ ಕಾರಾಗೃಹಗಳಿಗೆ ವರ್ಗಾಯಿಸುವುದರಿಂದಲೂ ಇಲ್ಲಿನ ಖೈದಿಗಳಿಗೆ ವೃತ್ತಿಪರ ಕಾಮಗಾರಿ ತರಬೇತಿ ನೀಡಲಾಗುವುದಿಲ್ಲ. ಆದರೆ

ಬಂದೀಖಾನೆಯ ಶುಚಿತ್ವ ಕಾಪಾಡಲು ನಿರ್ಮಾಣವಾಗಿರುವ ತೋಟದಲ್ಲಿ ದುಡಿಯಲು ಖೈದಿಗಳನ್ನು ತೊಡಗಿಸಲಾಗಿದೆ. ಅಲ್ಲದೇ ತೋಟದಲ್ಲಿ ಕೆಲಸ ಮಾಡುವ ಖೈದಿಗಳಿಗೆ ದಿನಂಪ್ರತಿ ಹತ್ತು ರೂ.ಗಳ ಕೂಲಿ ನೀಡಲಾಗುತ್ತದೆ.

ಪ್ರಸ್ತುತ ಬನ್ನೂರು ರಸ್ತೆಯಲ್ಲಿ ನೆಲೆಗೊಂಡಿರುವ ಈ ಬಂದೀಖಾನೆಯಲ್ಲಿ ೨೮೧ ಮಂದಿ ಪುರುಷ ಬಂದಿಗಳಿದ್ದು, ಮಹಿಳಾ ಖೈದಿಗಳಿರುವುದಿಲ್ಲ. ೧೯೯೯–೨೦೦೦ ಸಾಲಿಗೆ ಈ ಬಂದೀಖಾನೆಯಿಂದ ೧೯೨೮ ಮಂದಿ ಬಿಡುಗಡೆ ಹೊಂದಿದ್ದು, ಬಂದೀಖಾನೆಯ ಮೂರು ದಶಕಗಳ ವಾರ್ಷಿಕ ವೆಚ್ಚ ಈ ಮುಂದಿನದಂತಿದೆ.

| | | |
|---|---|---|
| ೧೯೮೦ | – | ರೂ. ೧,೭೨,೯೫೪.೦೦ |
| ೧೯೯೦ | – | ರೂ. ೫,೬೮,೩೧೯.೦೦ |
| ೨೦೦೦ | – | ರೂ. ೩೩,೮೯,೨೪೫.೦೦ |

## ನಾಗರಿಕ ಹಕ್ಕು ರಕ್ಷಣಾ ನಿರ್ದೇಶನಾಲಯ

ಈ ನಿರ್ದೇಶನಾಲಯವು ದಿನಾಂಕ ೭.೮.೧೯೭೪ ರಂದು ರಾಜ್ಯದಲ್ಲಿ 'ನಾಗರಿಕ ಹಕ್ಕು ರಕ್ಷಣಾ ಕೋಶ'ವಾಗಿ, ಒಬ್ಬ ಪೋಲಿಸ್ ಸೂಪರಿಂಟೆಂಡರ ನೇತೃತ್ವದಲ್ಲಿ ಕಾರ್ಯಾರಂಭ ಮಾಡಿತು. ೧೯೭೮ರಲ್ಲಿ ಇದಕ್ಕಾಗಿ ಡಿ.ಐ.ಜಿ.ಪಿ. (ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲಿಸ್) ಹುದ್ದೆ ಸೃಷ್ಟಿಯಾಯಿತು. ೧೯೮೦ರಲ್ಲಿ ಈ ಕೋಶವು ಪುನರ್ವಿಂಗಡಣೆ ಹೊಂದಿ, ಬೆಂಗಳೂರು, ಬೆಳಗಾವಿ, ಮೈಸೂರು ಮತ್ತು ಗುಲಬರ್ಗಾಗಳಲ್ಲಿ ಪ್ರಾಂತೀಯ ಕೋಶಗಳು ಪ್ರಾರಂಭಿಸಲ್ಪಟ್ಟವು. ೧೯೮೮ರಲ್ಲಿ ಪ್ರತೀ ಕೋಶವೂ ಒಬ್ಬ ಐ.ಜಿ.ಪಿ. ಹುದ್ದೆಯ ಅಧಿಕಾರಿಯ ಆಡಳಿತಕ್ಕೊಳಪಟ್ಟಿತು. ೨೦.೧೧.೧೯೯೨ರಲ್ಲಿ ಈ ಕೋಶವನ್ನು ನಾಗರಿಕ ಹಕ್ಕು ರಕ್ಷಣಾ ನಿರ್ದೇಶನಾಲಯ ಎಂದು ಪುನರ್ನಾಮಕರಣ ಮಾಡಿ, ಎ.ಡಿ.ಜಿ.ಪಿ. (ಅಸಿಸ್ಟೆಂಟ್ ಡೆಪ್ಯುಟಿ ಜನರಲ್ ಆಫ್ ಪೊಲಿಸ್) ಹುದ್ದೆಯ ಅಧಿಕಾರಿಯನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿದೆ. ಪ್ರಸ್ತುತ ಈ ನಿರ್ದೇಶನಾಲಯವು ಏಳು ಪ್ರಾಂತಗಳನ್ನು ಒಳಗೊಂಡಿದ್ದು, ಪ್ರತೀ ಪ್ರಾಂತವೂ ಒಬ್ಬ ಪೋಲಿಸ್ ಸೂಪರಿಂಟೆಂಡರ ಆಡಳಿತದಲ್ಲಿದೆ. ಮಂಡ್ಯ ಜಿಲ್ಲೆಯ ನಿರ್ದೇಶನಾಲಯ ಮೈಸೂರು ಪ್ರಾಂತದ ಅಧಿಕಾರಿಯ ಆಡಳಿತಕ್ಕೊಳಪಡುತ್ತದೆ. ೧೯೫೫ರ ನಾಗರಿಕ ಹಕ್ಕು ರಕ್ಷಣಾ ಕಾಯ್ದೆ ಹಾಗೂ ೧೯೮೯ರ ಎಸ್. ಸಿ. ಎಸ್.ಟಿ. ಕಾಯ್ದೆಗಳನ್ನು ಸಂಪೂರ್ಣ ಅನುಷ್ಠಾನಗೊಳಿಸುವ ಉದ್ದೇಶದಿಂದ ಸ್ಥಾಪಿತವಾದ ಈ ನಿರ್ದೇಶನಾಲಯ ರಾಜ್ಯದಲ್ಲಿ ದಲಿತೋದ್ಧಾರ ಹಾಗೂ ದಲಿತ ಸಂರಕ್ಷಣೆಗಾಗಿ ಕಾನೂನುಕ್ರಮ ಕೈಗೊಳ್ಳುವ ಏಕೈಕ ಸರಕಾರಿ ಸಂಸ್ಥೆಯಾಗಿದೆ. ದಲಿತರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಸಂಬಂಧಪಟ್ಟ ಪೋಲಿಸ್ ಠಾಣೆಗಳಲ್ಲಿ ದಾಖಲಿಸಲ್ಪಡುವ ದೂರುಗಳನ್ನು ಈ ನಿರ್ದೇಶನಾಲಯ ಪರಿಶೀಲಿಸಿ, ಕಾನೂನು ಕ್ರಮಗಳ ಮೂಲಕ ಅವರಿಗೆ ಪರಿಹಾರ ಒದಗಿಸುತ್ತದೆ.

ಸುಳ್ಳು ದಾಖಲಾತಿ ಪತ್ರಗಳ ಮೂಲಕ ಪರಿಶಿಷ್ಟರಿಗೆ ಮೀಸಲಾದ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಳ್ಳುವ ಪ್ರಕರಣಗಳ ಬಗ್ಗೆಯೂ ನಿರ್ದೇಶನಾಲಯ ನಿಯಮಾನುಸಾರ ಕ್ರಮ ಕೈಗೊಳ್ಳುತ್ತದೆ. ಪರಿಶಿಷ್ಟರ ಮೇಲಿನ ದೌರ್ಜನ್ಯಗಳ ಅಂಕಿ ಅಂಶಗಳನ್ನು ಕ್ರೋಢೀಕರಿಸಿ ಸರಕಾರಕ್ಕೆ ಸಲ್ಲಿಸುವುದು, ನಿರ್ದೇಶನಾಲಯದ ಕರ್ತವ್ಯಗಳಲ್ಲಿ ಒಂದಾಗಿದೆ.

ಅಸ್ಪೃಶ್ಯತಾ ನಿವಾರಣಾ ಕಾಯ್ದೆಯಡಿ ಪರಿಶಿಷ್ಟರಿಗೆ ರಕ್ಷಣೆ ನೀಡುವ ಈ ನಿರ್ದೇಶನಾಲಯ, ದಲಿತ ಜಾತಿಯ ಬಗ್ಗೆ ಅವಹೇಳನಕಾರಿ ಶಬ್ದಗಳ ಬಳಕೆಯ ಬಗ್ಗೆಯೂ ಕಾನೂನು ಕ್ರಮ ಕೈಗೊಂಡು ಮೇಲ್ಕಂಡ ರೀತಿಯ ಪ್ರತೀ ದೂರಿನ ಬಗ್ಗೆ ಅಮೂಲಾಗ್ರ ತನಿಖೆ ನಡೆಸಿ, ನ್ಯಾಯ ದೊರಕಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ.

ಮಂಡ್ಯ ಜಿಲೆಯಲ್ಲಿ ದೌರ್ಜನ್ಯ ನಿರ್ಬಂಧ ಕಾಯ್ದೆ ಹಾಗೂ ನಾಗರಿಕ ಹಕ್ಕು ರಕ್ಷಣಾ ಕಾಯ್ದೆಗಳಡಿ ೧೯೯೭ ರಿಂದ ೨೦೦೦ರವರೆಗೆ ದಾಖಲಾದ ಹಾಗೂ ಪರಿಹಾರ ಹೊಂದಿದ ದೂರುಗಳ ಅಂಕಿಅಂಶಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೦.೨೫**

| ದಾಖಲಾದವು | | | | | | | | | |
|---|---|---|---|---|---|---|---|---|---|
| ೧೯೯೫ | | ೧೯೯೬ | | ೧೯೯೭ | | ೧೯೯೮ | | ೧೯೯೯ | |
| ದೌನಿಕ | ನಾಹರಕಾ | ದೌನಿಕ | ನಾಹರಕಾ | ದೌನಿಕ | ನಾಹರಕಾ | ದೌನಿಕ | ನಾಹರಕಾ | ದೌನಿಕ | ನಾಹರಕಾ |
| ೩೯ | ೧೩ | ೪೬ | ೦೯ | ೫೫ | ೦೭ | ೪೩ | ೦೩ | ೨೧ | ೦೦ |
| **ಪರಿಹಾರಗೊಂಡವು** | | | | | | | | | |
| ೧೫ | ೧೨ | ೩೬ | ೦೯ | ೪೫ | ೦೪ | ೪೦ | ೦೨ | ೧೮ | ೦೦ |

ಸೂಚನೆ:–ದೌನಿಕಾ: ದೌರ್ಜನ್ಯ ನಿರ್ಬಂಧ ಕಾಯ್ದೆ ನಾಹರಕಾ: ನಾಗರೀಕ ಹಕ್ಕು ರಕ್ಷಣಾ ಕಾಯ್ದೆ

## ಬೆರಳು ಮುದ್ರೆ ಘಟಕ

ಈ ಘಟಕವು ೧೯೯೫ ರಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದುವರೆಗೆ ಹಲವಾರು ಪ್ರಮುಖ ಪ್ರಕರಣಗಳಲ್ಲಿ ಶೋಧನಾ ಕಾರ್ಯ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ನೆರವಾಗಿದೆ. ಈ ಘಟಕವು ಕೈಗೊಂಡ ಒಟ್ಟು ೧೫೩ ಪ್ರಕರಣಗಳಲ್ಲಿ, ೪೭ ರಲ್ಲಿ ಚಾನ್ಸ್ ಪ್ರಿಂಟ್ ದೊರೆತಿದ್ದು, ಒಟ್ಟು ಐದು ಪ್ರಕರಣಗಳು ಪತ್ತೆಯಾಗಿರುತ್ತವೆ. ಅಲ್ಲದೆ ಒಟ್ಟು ೧೦೭೨ ಮಂದಿ ದಸ್ತಗಿರಿಯಾದ ವ್ಯಕ್ತಿಗಳ ಬೆರಳುಮುದ್ರೆ ಪರಿಶೀಲಿಸಿ, ಇವರಲ್ಲಿ ೧೩ ಜನರ ಪೂರ್ವ ಸಜೆ ಬಗ್ಗೆ ವಿವರ ಪತ್ತೆ ಮಾಡಲಾಗಿದೆ.

## ಬೇಹುಗಾರಿಕೆ ವಿಭಾಗ

ಜಿಲ್ಲಾ ಪೋಲಿಸ್ ಕಚೇರಿಯಲ್ಲಿ ಬೇಹುಗಾರಿಕೆ ವಿಶೇಷ ವಿಭಾಗವು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯ ಎಲ್ಲೆಡೆ ನಡೆಯುವ ವಿದ್ಯಮಾನಗಳ ವಿವರಗಳನ್ನು ಇದು ಶೇಖರಿಸಿ ವರದಿ ಮಾಡುತ್ತದೆ. ಪ್ರಮುಖವಾಗಿ ರಾಜಕೀಯ ಚಟುವಟಿಕೆ, ವಿದ್ಯಾರ್ಥಿಗಳ ಹಾಗೂ ಕಾರ್ಮಿಕ ಚಟುವಟಿಕೆಗಳ ಬಗ್ಗೆ ಹೆಚ್ಚಿನ ನಿಗಾ ಇಡುತ್ತದೆ. ತನ್ಮೂಲಕ ಕೇಂದ್ರಸ್ಥಾನಕ್ಕೆ ಮಾಹಿತಿ ನೀಡಿ, ಸಂಭವನೀಯವಾದ ಯಾವುದೇ ಅಹಿತಕರ ಘಟನೆಗಳನ್ನು ನಿಷ್ಕ್ರಿಯಗೊಳಿಸುವಲ್ಲಿ ಅನುವು ಮಾಡಿಕೊಡುತ್ತದೆ. ಇದರಿಂದ ಜಿಲ್ಲೆಯ ಕಾನೂನು ಸುವ್ಯವಸ್ಥೆ ಸುಸೂತ್ರವಾಗಿ ನಡೆಯಲು ಸಾಧ್ಯವಾಗುತ್ತದೆ.

## ನಾಗರಿಕ ಬಂದೂಕು ತರಬೇತಿ ಕೇಂದ್ರ

ಪೋಲಿಸ್ ಪಡೆಯು ನೀಡುವ ರಕ್ಷಣೆಗೆ ಪೂರಕವಾಗಿ ನಾಗರಿಕರು ಸ್ವರಕ್ಷಣೆಗೆ ಯಾವುದೇ ಸಂದರ್ಭದಲ್ಲಿ ತಯಾರಿರಬೇಕಾಗಿರುತ್ತದೆ. ಹಲವು ವೇಳೆ ಇದಕ್ಕಾಗಿ ಬಂದೂಕು ಅಥವಾ ಪಿಸ್ತೂಲುಗಳಂತಹ ಅಸ್ತ್ರಗಳನ್ನು ಹೊಂದಿರುವ ಅವಶ್ಯಕತೆಯೂ ಉಂಟಾಗುತ್ತದೆ. ಅಂತಹ ಜನರಿಗೆ ಪೋಲಿಸ್ ಇಲಾಖೆಯ ಮೂಲಕ ಸರಕಾರ ಬಂದೂಕು ಉಪಯೋಗಿಸಲು ತರಬೇತಿ ನೀಡುವ ಕೇಂದ್ರವನ್ನು ಸ್ಥಾಪಿಸಿದೆ. ಈ ಕೇಂದ್ರ ಜಿಲ್ಲೆಯ ಕೇಂದ್ರಸ್ಥಾನವಾದ ಮಂಡ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ೨೦೦೦ ದಶಕದಲ್ಲಿ ಒಟ್ಟು ೪೭೦ ಪುರುಷರಿಗೂ ೪೬ ಸ್ತ್ರೀಯರಿಗೂ ಬಂದೂಕು ತರಬೇತಿ ನೀಡಿರುತ್ತದೆ.

**ಜಿಲ್ಲಾ ಶ್ವಾನದಳ**

ಜಿಲ್ಲೆಯ ಸಶಸ್ತ್ರ ಮೀಸಲು ಪಡೆಯಲ್ಲಿ ಶ್ವಾನದಳವು ೧೯೯೨ ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಎರಡು ಶ್ವಾನಗಳನ್ನೂ ಹಾಗೂ ಇಬ್ಬರು ಹ್ಯಾಂಡ್ಲರ್‌ಗಳನ್ನೂ ಹೊಂದಿರುತ್ತದೆ. ಕನ್ನ, ಕಳ್ಳತನ, ಡಕಾಯಿತಿ ಹಾಗೂ ಕೊಲೆ ಪ್ರಕರಣಗಳಲ್ಲಿ ಹಲವೆಡೆ ಪೋಲಿಸ್ ನಾಯಿಗಳು ಸಾಕಷ್ಟು ನೆರವು ನೀಡಿವೆ.

ಜಿಲ್ಲೆಯ ಕೇಂದ್ರಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಚಾರಿ ಠಾಣೆಗಳೂ ಸೇರಿದಂತೆ ಎಲ್ಲಾ ತಾಲೂಕು ಹಾಗೂ ಹಲವಾರು ಹೋಬಳಿಗಳಲ್ಲಿ ಒಟ್ಟು ೨೭ ಠಾಣೆ ಹಾಗೂ ೧೨ ಉಪಠಾಣೆಗಳು ಜಿಲ್ಲೆಯ ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುತ್ತಿವೆ. ಇವಲ್ಲದೆ ಇತರ ಘಟಕಗಳಾದ ಅಪರಾಧ ದಾಖಲಾತಿ ವಿಭಾಗ, ಜಿಲ್ಲಾ ವೈಜ್ಞಾನಿಕ ಘಟಕ, ರಾಜ್ಯ ಗುಪ್ತವಾರ್ತೆ, ಲೋಕಾಯುಕ್ತ, ಜಿಲ್ಲಾ ಸಶಸ್ತ್ರ ಪೋಲಿಸ್ ಪಡೆ ಹಾಗೂ ನಿಸ್ತಂತು ವಿಭಾಗಗಳೂ ಕಾರ್ಯೋನ್ಮುಖವಾಗಿವೆ.

**ಪೋಲಿಸ್ ಕಲ್ಯಾಣ ನಿಧಿ**

ಇಲಾಖಾ ಸಿಬ್ಬಂದಿಯ ಕಲ್ಯಾಣಕ್ಕಾಗಿ ಜಿಲ್ಲೆಯಲ್ಲಿ ಪೋಲಿಸ್ ಕಲ್ಯಾಣ ನಿಧಿಯು ತನ್ನ ಹಲವಾರು ಕಾರ್ಯಕ್ರಮಗಳ ಮೂಲಕ ಸಿಬ್ಬಂದಿಯ ಜೀವನವನ್ನು ಸುಗಮವಾಗಿಸಲು ಶ್ರಮವಹಿಸಿದೆ. ಸಿಬ್ಬಂದಿಗೆ ಸಮವಸ್ತ್ರ ಹೊಲಿಯುವ ಉದ್ದೇಶದಿಂದ ಡಿ.ಎ.ಆರ್.(ಡಿಸ್ಟ್ರಿಕ್ಟ್ ಆರ್ಮ್ಡ್ ರಿಜರ್ವ್ ಘಟಕ)ದಲ್ಲಿ ಆರು ಹೊಲಿಗೆ ಯಂತ್ರಗಳನ್ನು ಒಳಗೊಂಡ 'ಟೈಲರಿಂಗ್ ಸೆಂಟರ್' ಅನ್ನು ಪ್ರಾರಂಭಿಸಲಾಗಿದೆ. ಸಿಬ್ಬಂದಿ ಹಾಗೂ ಅವರ ಕುಟುಂಬಗಳಿಗೆ ಮನರಂಜನೆ ನೀಡುವ ಉದ್ದೇಶದಿಂದ 'ಕಾವೇರಿ' ಬಯಲು ಚಿತ್ರಮಂದಿರ ಪ್ರಾರಂಭಿಸಲ್ಪಟ್ಟಿದ್ದು, ಇಲ್ಲಿ ವಾರಕ್ಕೊಂದು ಚಲನಚಿತ್ರ ಪ್ರದರ್ಶನ ನಡೆಯುತ್ತದೆ. ಪೋಲಿಸರ ಮಕ್ಕಳಿಗಾಗಿಯೇ ಶ್ರೀರಂಗಪಟ್ಟಣದಲ್ಲಿ ಬಾಲವಾಡಿ ಕೇಂದ್ರ ಒಂದು ಸ್ಥಾಪನೆಗೊಂಡಿದ್ದು, ಇಲ್ಲಿ ಐದು ವರ್ಷಗಳ ಒಳಗಿನ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ ನೀಡಲಾಗುತ್ತಿದೆ. ಶಾಲೆಗೆ ಹೋಗುವ ಅಭ್ಯಾಸವನ್ನು ಮಕ್ಕಳಲ್ಲಿ ಮೂಡಿಸುವುದೇ ಇದರ ಉದ್ದೇಶವಾಗಿದೆ. ಇದರ ಮೇಲ್ವಿಚಾರಣೆಗಾಗಿ ಒಬ್ಬ ಮಹಿಳಾ ಶಿಕ್ಷಕಿಯನ್ನು ಮಾಹೆಯಾನ ೩೦೦ ರೂಪಾಯಿಗಳ ಪ್ರೋತ್ಸಾಹ ಧನದ ಆಧಾರದ ಮೇಲೆ ನೇಮಿಸಲಾಗಿದೆ. ಪೋಲಿಸ್ ಸಿಬ್ಬಂದಿ ಹಾಗೂ ಅವರ ಕುಟುಂಬಗಳ ಉಪಯೋಗಕ್ಕಾಗಿ ಮಂಡ್ಯದ ಡಿ.ಎ.ಆರ್. ಕಾಲೋನಿಯಲ್ಲಿ ಶ್ರೀ ಚಾಮುಂಡೇಶ್ವರಿ ಕಲ್ಯಾಣ ಮಂಟಪ ಸ್ಥಾಪನೆಯಾಗಿದೆ. ಇದನ್ನು ಇಲಾಖಾ ಸಿಬ್ಬಂದಿ ವರ್ಗಕ್ಕೆ ರಿಯಾಯಿತಿ ದರದಲ್ಲಿ ಬಾಡಿಗೆಗೆ ನೀಡಲಾಗುತ್ತದೆ. ಇದೇ ಕಾಲೋನಿಯಲ್ಲಿ ಸಿಬ್ಬಂದಿವರ್ಗದ ಮಕ್ಕಳ ಉಪಯೋಗಕ್ಕಾಗಿಯೇ ಉದ್ಯಾನವನ್ನು ನಿರ್ಮಿಸಲಾಗಿದೆ. ವಿಶೇಷ ಕರ್ತವ್ಯದ ಮೇಲೆ ಜಿಲ್ಲೆಗೆ ಬರುವ ಅಧಿಕಾರಿಗಳ ವಾಸ್ತವ್ಯಕ್ಕಾಗಿ ಕೆ.ಆರ್.ಸಾಗರದಲ್ಲಿ ಸುಸಜ್ಜಿತ ಅತಿಥಿ ಗೃಹವೊಂದನ್ನು ನಿರ್ಮಿಸಲಾಗಿದೆ.

**ಪದಕ, ಗೌರವಗಳು**

ಜಿಲ್ಲೆಯ ಪೋಲಿಸ್ ಸಿಬ್ಬಂದಿಯಲ್ಲಿ ೧೯೯೦ ರಿಂದ ೨೦೦೦ ದಶಕದಲ್ಲಿ ಒಂದು ರಾಷ್ಟ್ರಪತಿ ಪದಕ ಒಂದು ಚಿನ್ನದ ಪದಕ ಹಾಗೂ ನಾಲ್ಕು ರಜತ ಪದಕಗಳನ್ನೂ ಆ ಗೌರವಕ್ಕೆ ಪಾತ್ರರಾದವರು ಪಡೆದಿರುತ್ತಾರೆ.

## ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸಿದ ಪೋಲಿಸ್ ವರಿಷ್ಠಾಧಿಕಾರಿಗಳ ಪಟ್ಟಿ

| ಕ್ರ.ಸಂ. | ಹೆಸರು | ಅವಧಿ |
|---|---|---|
| | ಶ್ರೀಯುತರು : | |
| ೧ | ಎಸ್.ವಿ.ಪಂಡಿತ್, ಐ.ಪಿ.ಎಸ್. | ೧೫-೦೫-೫೭ ರಿಂದ ೨೩-೦೭-೫೯ |
| ೨ | ಜಿ.ವಿ.ರಾವ್, ಐ.ಪಿ.ಎಸ್. | ೨೩-೦೭-೫೯ ರಿಂದ ೨೦-೦೭-೬೦ |
| ೩ | ಕೆ.ಹನುಮಂತರಾವ್, ಐ.ಪಿ.ಎಸ್. | ೨೦-೦೭-೬೦ ರಿಂದ ೧೨-೦೧-೬೧ |
| ೪ | ಮಹಮದ್ ಮುಸ್ತಾಕ್, ಐ.ಪಿ.ಎಸ್. | ೧೩-೦೩-೬೧ ರಿಂದ ೦೪-೦೬-೬೨ |
| ೫ | ಡಿ.ವಿಜಯದೇವರಾಜೇ ಅರಸ್, ಐ.ಪಿ.ಎಸ್. | ೦೪-೦೬-೬೨ ರಿಂದ ೨೪-೦೪-೬೫ |
| ೬ | ಹೆಚ್.ವರದರಾಜ ಅಯ್ಯಂಗಾರ್, ಐ.ಪಿ.ಎಸ್. | ೨೪-೦೪-೬೫ ರಿಂದ ೨೫-೧೦-೬೫ |
| ೭ | ಎಸ್. ನೀಲಕಂಠ ಆರಾಧ್ಯ, ಐ.ಪಿ.ಎಸ್. | ೨೫-೧೦-೬೫ ರಿಂದ ೦೯-೦೬-೬೬ |
| ೮ | ಆರ್.ಎಸ್.ಚೋಪ್ರ, ಐ.ಪಿ.ಎಸ್. | ೧೪-೦೭-೬೬ ರಿಂದ ೦೪-೦೧-೬೭ |
| ೯ | ಕೆ.ಬಾಲಕೃಷ್ಣ, ಐ.ಪಿ.ಎಸ್. | ೧೬-೦೧-೬೭ ರಿಂದ ೧೬-೦೫-೬೯ |
| ೧೦ | ಎ.ಪಿ.ದೊರೈ, ಐ.ಪಿ.ಎಸ್. | ೧೭-೦೫-೬೯ ರಿಂದ ೧೬-೦೫-೭೦ |
| ೧೧ | ಕೆ.ಯು.ಶೆಟ್ಟಿ, ಐ.ಪಿ.ಎಸ್. | ೧೮-೦೫-೭೦ ರಿಂದ ೧೮-೦೬-೭೩ |
| ೧೨ | ಸಯ್ಯದ್ ಅಬಿದ್ ಅಲಿ, ಐ.ಪಿ.ಎಸ್. | ೨೮-೦೬-೭೩ ರಿಂದ ೦೬-೦೩-೭೪ |
| ೧೩ | ಹಮರ್ ಜಿ. ಸಾಂಗ್ಲಿಯಾನಾ ಐ.ಪಿ.ಎಸ್. | ೨೬-೦೩-೭೪ ರಿಂದ ೧೧-೦೩-೭೬ |
| ೧೪ | ಆರ್.ಎಸ್. ಚೋಪ್ರ, ಐ.ಪಿ.ಎಸ್. | ೧೮-೦೩-೭೬ ರಿಂದ ೩೧-೦೮-೭೬ |
| ೧೫ | ಬಿ.ಎಂ. ಯಶವಂತ ಗೋಳ್, ಐ.ಪಿ.ಎಸ್. | ೧೦-೦೯-೭೬ ರಿಂದ ೧೮-೦೫-೭೭ |
| ೧೬ | ರಾಜನ್ ಗುಪ್ತ, ಐ.ಪಿ.ಎಸ್. | ೧೨-೦೭-೭೭ ರಿಂದ ೧೦-೦೪-೭೮ |
| ೧೭ | ಎಸ್.ಎನ್.ಬೋರ್ಕರ್, ಐ.ಪಿ.ಎಸ್. | ೧೦-೦೪-೭೮ ರಿಂದ ೨೪-೦೩-೮೦ |
| ೧೮ | ಬಿ. ಎಂ. ಉತ್ತಪ್ಪ, ಐ.ಪಿ.ಎಸ್. | ೧೦-೦೪-೮೦ ರಿಂದ ೩೦-೦೯-೮೨ |
| ೧೯ | ವಿ. ಜಿ. ನಾಗನೂರು, ಐ.ಪಿ.ಎಸ್. | ೩೦-೦೯-೮೨ ರಿಂದ ೦೩-೧೨-೮೨ |
| ೨೦ | ಎಸ್.ಎನ್. ಬಿದರಿ, ಐ.ಪಿ.ಎಸ್. | ೦೩-೧೨-೮೨ ರಿಂದ ೦೧-೦೬-೮೩ |
| ೨೧ | ಅಜಯ್ ಕುಮಾರ್ ಸಿಂಹ, ಐ.ಪಿ.ಎಸ್. | ೦೧-೦೬-೮೩ ರಿಂದ ೨೨-೦೬-೮೪ |
| ೨೨ | ಹೆಚ್.ಆರ್. ಬಿಳದಲಿ, ಐ.ಪಿ.ಎಸ್. | ೦೯-೦೭-೮೪ ರಿಂದ ೧೩-೦೭-೮೭ |
| ೨೩ | ಹೆಚ್.ಆರ್.ನಾಯಕ್, ಐ.ಪಿ.ಎಸ್. | ೧೩-೦೭-೮೭ ರಿಂದ ೦೭-೦೬-೮೯ |
| ೨೪ | ಎಂ.ಎನ್. ರೆಡ್ಡಿ, ಐ.ಪಿ.ಎಸ್. | ೦೭-೦೬-೮೯ ರಿಂದ ೦೧-೦೬-೯೨ |
| ೨೫ | ಎಸ್. ಮಹಾಪಾತ್ರ, ಐ.ಪಿ.ಎಸ್. | ೦೧-೦೬-೯೨ ರಿಂದ ೨೬-೧೨-೯೨ |
| ೨೬ | ಆರ್. ಹೆಚ್.ಔರಾದ್‌ಕರ್, ಐ.ಪಿ.ಎಸ್. | ೨೬-೧೨-೯೨ ರಿಂದ ೦೭-೦೫-೯೫ |
| ೨೭ | ಪಿ.ಕೆ. ಗರ್ಗ್, ಐ.ಪಿ.ಎಸ್. | ೨೨-೦೫-೯೫ ರಿಂದ ೦೪-೦೬-೯೭ |
| ೨೮ | ಸಂಜಯ್ ಸಹಾಯ್, ಐ.ಪಿ.ಎಸ್. | ೦೪-೦೬-೯೭ ರಿಂದ ೧೪-೦೧-೨೦೦೦ |
| ೨೯ | ಕೆ.ಎಸ್.ಆರ್.ಚರಣ್ ರೆಡ್ಡಿ, ಐ.ಪಿ.ಎಸ್. | ೧೪-೦೧-೨೦೦೦ ರಿಂದ ೩-೧೧-೨೦೦೦ |
| ೩೦ | ಅಮರ್ ಕುಮಾರ್ ಪಾಂಡೆ, ಐ.ಪಿ.ಎಸ್. | ೬-೧೧-೨೦೦೦ ರಿಂದ -೨೦-೦೬-೨೦೦೨ |
| ೩೧ | ಮಾಲಿನಿ ಕೃಷ್ಣಮೂರ್ತಿ, ಐ.ಪಿ.ಎಸ್. | ೨೨-೦೬-೨೦೦೨ ರಿಂದ ಈವರೆಗೆ |